ಇದು ಏನೇ ಇರಬಹುದು, ಇದೆಲ್ಲಾ ಇದ್ದೇ ಇರುತ್ತದೆ. ಆದರೆ ತಾವು ಎಲ್ಲಾ ರಾಜಕೀಯ ಪಕ್ಷದವರನ್ನೂ ಕರೆದು ಚರ್ಚೆ ಮಾಡಿರುವುದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಸಭಾನಾಯಕರು ಮತ್ತು ಈ ಕಡೆ ಇರತಕ್ಕ ಮಾನ್ಯ ವಿರೋಧಪಕ್ಷದ ನಾಯಕರು, ಅದೇ ರೀತಿ ಪಕ್ಷೇತರ ಮಾನ್ಯ ಸದಸ್ಯರುಗಳು, ಆಯಾ ಪಕ್ಷಗಳ ಮಾನ್ಯ ಸದಸ್ಯರುಗಳು ಬಹಳ ಸಹಕಾರವನ್ನು ಕೊಟ್ಟು ಅಭಿಮಾನದಿಂದ ಬಂದು ತಮ್ಮ ಪ್ರಯತ್ನವನ್ನು ಮಾಡಿದ್ದಾರೆ. ಅದರ ವಿವರಕ್ಕೆ ಈಗ ನಾನು ಹೋಗುವುದಿಲ್ಲ. ಏಕೆಂದರೆ ಅದರ ಫಲಿತಾಂಶವನ್ನು ಪ್ರಸ್ತಾಪ ಮಾಡತಕ್ಕ ಸಂದರ್ಭ ಇದಲ್ಲವಾದ್ದರಿಂದ ಇದನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡತಕ್ಕದ್ದು ಅಪ್ರಕೃತ ಎಂದು ಹೇಳಬಯಸುತ್ತೇನೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಹಕ್ಕುಬಾಧ್ಯತೆಯ ನಿರ್ಣಯದ ಚರ್ಚೆಯ ಬಗ್ಗೆ ತಾವು ಕೊಟ್ಟಿದ್ದೇವೆ, ಆ ಪೈಕಿ ಯಾರು ಮೊದಲು ಕೊಟ್ಟಿದ್ದಾರೆ ಅವರನ್ನು ತಾವು ಮೊದಲು ಕರೆಯಬೇಕು. ನನಗೆ ಗೊತ್ತಿರುವಂತೆ ಮಾನ್ಯ ಶ್ರೀರಾಮರೆಡ್ಡಿಯವರು ಮೊದಲು ಕೊಟ್ಟಿದ್ದಾರೆ. ತಮ್ಮ ನಿಯಮಾವಳಿಯ ಪ್ರಕಾರ ತಾವು ಯಾರನ್ನಾದರೂ ಕರೆಯಿರಿ. ಹಾಗೆ ಕರೆದು ವಿಷಯದ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿಯನ್ನು ನಿರ್ಣಯವನ್ನು ಕೊಟ್ಟಿರುವವರ ಪರವಾಗಿ ಹಾಗೂ ಸದನದ ಪರವಾಗಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದು ಈ ಸದನದ ಘನತೆ ಗೌರವ, ತಮ್ಮ ಸ್ಥಾನಮಾನದ ಘನತೆ ಗೌರವ, ಅದೇ ರೀತಿ ಮಾನ್ಯ ಸದಸ್ಯರ ಘನತೆ ಗೌರವಗಳೂ ಇದರಲ್ಲಿ ಒಳಗೊಂಡಿರುವುದರಿಂದ ಮತ್ತು ರಾಜಕೀಯ ಪಕ್ಷಗಳ ವಿಚಾರವೂ ಇದರಲ್ಲಿ ಇರುವುದರಿಂದ ದಯವಿಟ್ಟು ಇದಕ್ಕೆ ಆದ್ಯತೆಯನ್ನು ಕೊಟ್ಟು ಈ ನಿರ್ಣಯವನ್ನು ತಾವು ಚರ್ಚೆಗೆ ತೆಗೆದುಕೊಳ್ಳಬೇಕು ಮಾನ್ಯ ಸದಸ್ಯರನ್ನು ಚರ್ಚೆಗೆ ಕರೆಯಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದೊಂದು ವಿಶೇಷವಾದ ಪ್ರಸಂಗ. ಬಹುಶಃ ಈ ಸದನದ ಇತಿಹಾಸದಲ್ಲಿ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿರಲಿಲ್ಲ. ನನಗಂತೂ ಮನಸ್ಸು ಬಹಳ ನೊಂದು ನಾನು ತಮ್ಮ ಮುಂದೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ಪ್ರಸಂಗಕ್ಕೆ ಒಂದು ತೆರೆಯನ್ನು ಎಳೆಯಬೇಕೆಂದು ನಾನು ಬಹಳ ಪ್ರಯತ್ನ ಪಟ್ಟೆ. ಸ್ವಲ್ಪ ಹೆಚ್ಚೂ ಕಡಿಮೆ ಕಳೆದ 3Ë4 ದಿನಗಳಿಂದ ಪ್ರಯತ್ನ ಮಾಡಿ ಇದು ಒಂದು ರೀತಿಯ ತಿಳಿ ವಾತಾವರಣಕ್ಕೆ ಬರಬೇಕು. ಇಲ್ಲಿ ಇನ್ನೂ ಅನೇಕ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಇದನ್ನೇ ಮುಂದುವರೆಸಿಕೊಂಡು ಹೋದರೆ ಬಹಳ ಪ್ರಮುಖವಾದ ಚರ್ಚೆಗಳು ಬೇರೆ ದಿಕ್ಕನ್ನು ತಲುಪುತ್ತದೆಂದು ಯೋಚಿಸಿ, ಇದನ್ನು ಏನಾದರೂ ಮಾಡಿ ಶಮನ ಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರಬೇಕೆಂದು ಸಂಪೂರ್ಣ ಪ್ರಯತ್ನವನ್ನು ನಾನು ಮಾಡಿದ್ದಾಯಿತು. ತಮ್ಮ ಔದಾರ್ಯ ಮತ್ತು ತಾವು ತೆಗೆದುಕೊಂಡ ವಿಚಾರದ ಬಗ್ಗೆ ಈ ಸದನದಲ್ಲಿ ತಮಗೆ ಅಭಿನಂದನೆಯನ್ನು ನಾನು ಸಲ್ಲಿಸಬೇಕಾಗಿದೆ. ತಮ್ಮ ಸ್ಥಾನ ಬಹಳ ದೊಡ್ಡದು. ತಮ್ಮ ಸ್ಥಾನದ ಗೌರವ ಬಹಳ ದೊಡ್ಡದು. ತಮ್ಮ ಸ್ಥಾನದ ಗೌರವವನ್ನು ಎತ್ತಿ ಹಿಡಿಯಬೇಕಾದುದು ನಮ್ಮೆಲ್ಲರ ಆದ ಕರ್ತವ್ಯ. ಈ ಸ್ಥಾನಕ್ಕಾಗಲಿ, ಅಥವಾ ಆ ಸ್ಥಾನದಲ್ಲಿರತಕ್ಕ ತಮದಾಗಲಿ ಕಿಂಚಿತ್ ಅಗೌರವವಾದರೂ ಅದು ಇಡೀ ಸದನಕ್ಕೆ ಅಗೌರವ ಎನ್ನತಕ್ಕ ಮಾತನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಆದರೆ ಯಾರು ಈ ಸ್ಥಾನಕ್ಕೆ ಅಗೌರವವಾಗತಕ್ಕ ಪದಗಳನ್ನು ಆಡಿದ್ದಾರೆ. ಅವರು ಪ್ರಾಮಾಣಿಕವಾಗಿ, ಬೇಷರತ್ ಆಗಿ ಕ್ಷಮಾಪಣೆಯನ್ನು ಕೇಳಬೇಕಾದದು ಅವರ ಕರ್ತವ್ಯ. ಆ ಪ್ರಶ್ನೆ ಬೇರೆ. ಅದು ಅವರಿಗೆ ಸೇರಿದ್ದುದು. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಪ್ರಶ್ನೆ ಎಂದರೆ ಇವತ್ತು ನಾವು ಬೆಳಿಗ್ಗೆ 10 ಗಂಟೆಗೆ ಇಲ್ಲಿಗೆ ಬಂದು ಇಲ್ಲಿಯವರೆಗೂ ಏನಾಯಿತೆಂಬುದು ಈ ರಾಜ್ಯದ ಜನತೆಗೂ

ಗೊತ್ತಿಲ್ಲ. ಅಷ್ಟೇ ಅಲ್ಲ, ಇಲ್ಲಿ ಕುಳಿತಿರತಕ್ಕ ಬಹುತೇಕ ಶಾಸಕರಿಗೂ ಕೂಡ ಇಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿಲ್ಲ. ಇಂಥ ಒಂದು ಘಟ್ಟವನ್ನು ನಾವು ತಲುಪಿ ಅಂತಿಮವಾಗಿ ಏನಾಯಿತೆಂದರೆ ಒಂದು ರೀತಿಯ ಸಂಧಾನ ಆಗಿ ಈ ಪರಿಸ್ಥಿತಿಗೆ ಒಂದು ಹೊಸ ಆಯಾಮ ಸಿಕ್ಕುತ್ತದೆಂದು ನಾವು ಏನು ಯೋಚನೆ ಮಾಡಿದ್ದವು, ಅದಕ್ಕೆ ಈಗ ಒಂದು ತೆರೆ ಬಿದ್ದಿದೆ ಎಂದು ನಿರಾಶಾವಾದಿಯಾಗುವುದಕ್ಕೆ ನಾನು ತಯಾರಿಲ್ಲ. ನಾನು ಇನ್ನೂ ಆಸೆಯನ್ನು ಇಟ್ಟು ಕೊಂಡಿದ್ದೇನೆ. ಹಕ್ಕುಚ್ಯುತಿ ನಿರ್ಣಯಗಳನ್ನು ,ಮಂಡಿಸಬೇಡಿ ಎಂದು ನಾನು ಯಾರಿಗೂ ಹೇಳುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ : ಅಷ್ಟು ಹೇಳಿದರೆ ಸಾಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಬಂಗಾರಪ್ಪನವರು ಹೇಳುವಂತೆಯೇ ನಾನೂ ಹೇಳಬೇಕೆಂದರೆ ಹೇಗೆ? ಇದು ಸರಿಯಲ್ಲ. ನಾನೂ ಮತ್ತು ಬಂಗಾರಪ್ಪನವರೂ ಒಳ್ಳೆಯ ಸ್ನೇಹಿತರು. ಅನೇಕಸಾರಿ ಅವರು ಹೇಳುವಂಥ ಮಾತುಗಳನ್ನು ಕೇಳುವಂಥ ಔದಾರ್ಯವೂ ಉಂಟು. ಆದರೆ ಕೆಲವು ಸಂದರ್ಭದಲ್ಲಿ ಹೀಗೇ ಹೇಳಿ ಎಂದು ಹಿಡಿದುಕೊಂಡಾಗ ಕೇಳುವುದು ಬಹಳ ಕಷ್ಟವಾಗುತ್ತದೆ. ಅದು ಆಗಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾ: 10Ë8Ë95ರ ಪತ್ರಿಕಾ ಗೋಷ್ಠಿಯಲ್ಲಿ ನನ್ನ ಹೇಳಿಕೆಯಿಂದ ಏನಾದರೂ ತಪ್ಪು ಮಾಹಿತಿ ಆಗಿದ್ದರೆ ಅದರ ಬಗ್ಗೆ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರಿಂದ ತಮ್ಮ ಮನಸ್ಸಿಗೆ ಏನು ನೋವಾಗಿದೆ ಅದಕ್ಕೆ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸಿದ್ದೇನೆ. ತಮ್ಮ ಮನೆಗೆ ಬಂದು ವಿಷಾದವನ್ನು ವ್ಯಕ್ತ ಪಡಿಸಿದ್ದೇನೆ, ಸಾರ್ವಜನಿಕವಾಗಿ ಪತ್ರಿಕೆಗಳ ಮೂಲಕ ವಿಷಾದವನ್ನು ವ್ಯಕ್ತಪಡಿಸುತ್ತಿದ್ದೇನೆ. ಅಷ್ಟೇ ಅಲ್ಲ, ಇಲ್ಲಿ ಬೇಷರತ್ ಆಗಿ ನನ್ನ ವಿಷಾದವನ್ನು ವ್ಯಕ್ತ ಪಡಿಸುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಪಾಯಿಂಟ್ ಆಫ್ ಆರ್ಡರ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೇ ಕಾರಣದಿಂದಲೂ ತಮ್ಮ ಮನಸ್ಸಿಗೆ ನೋವನ್ನುಂಟು ಮಾಡಬೇಕೆಂಬ ಅಭಿಪ್ರಾಯ ನನಗೆ ಇರಲಿಲ್ಲ....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನಾನು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಆಗಲಿ ಇವರು ಪಾಯಿಂಟ್ ಆಫ್ ಆರ್ಡರ್ ಎತ್ತಿದಾಗ ಅವಕಾಶವನ್ನು ಮಾಡಿಕೊಟ್ಟಿರಿ. ಆದರೆ ಈಗ ಇವರಿಗೂ ಕೊಡಬೇಕಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ನನ್ನ ಮಾತನ್ನು ಮುಗಿಸಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಗೇಗೌಡರು ಈಲ್ಡ್ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ಇನ್ನೂ ನನ್ನ ಮಾತನ್ನು ಮುಗಿಸಿಲ್ಲ.

ಒಬ್ಬ ಮಾನ್ಯ ಸದಸ್ಯರು : ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ತಮ್ಮ ಮುಂದೆ ಈ ಸಭೆಯ ಹಕ್ಕು ಬಾಧ್ಯತೆಗೆ ಸಂಬಂಧಪಟ್ಟಂತೆ ಕೆಲವು ಮಾನ್ಯ ಸದಸ್ಯರು ತಮ್ಮ ಅನುಮತಿಗಾಗಿ ನಿಯಮಾವಳಿಗಳ ಪ್ರಕಾರ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದಾರೆ ಅದು ಇನ್ನೂ ಕೂಡ ಈ ಸದನದ ಮುಂದೆ ಮಂಡನೆ ಆಗಿಲ್ಲ. ಅದಕ್ಕಿಂತ ಮುಂಚಿತವಾಗಿ ಇದರ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧುವಲ್ಲ. ಇದರಲ್ಲಿ ನಾವು ನಮ್ಮ ಸದನದ ನಿಯಮಗಳನ್ನು ಮುರಿದು ಸ್ವಲ್ಪ ಮಟ್ಟಿಗೆ ಮುಂದೆ ಹೋಗುತ್ತಿದ್ದೇವೆಂದು ನಾನು ಭಾವಿಸಿಕೊಳ್ಳುತ್ತೇನೆ. ತಾವೂ ಮತ್ತು ಈ ಸದನದ ಎಲ್ಲಾ ಪಕ್ಷಗಳ ಗೌರವಾನ್ವಿತ ಸದಸ್ಯರು ಇವತ್ತು ಬೆಳಿಗ್ಗೆಯಿಂದ ನಾನಾ ರೀತಿಯ ಚರ್ಚೆಗಳನ್ನು ಮಾಡಿದ್ದಾರೆ. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಮಧ್ಯೆ ಈ ಸದನದ ಮಾನ್ಯ ಉಪಾಧ್ಯಕ್ಷರಿಗೆ ಈ ಸಭೆಯನ್ನು ಮುಂದೂಡಿರುವುದರಿಂದ ಈಗ ತಮ್ಮ ಮುಂದಿರತಕ್ಕ ಸೂಚನೆಗಳನ್ನು ಮಂಡನೆ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಡುವುದು ಸೂಕ್ತ. ಆದಾದ ಮೇಲೆ, ಈ ಸದನ ಯಾವ ರೀ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸುತ್ತದೆಂದು ಸರಿಯಲ್ಲವೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಅಷ್ಟೆ.

ಅಧ್ಯಕ್ಷರು : ಈಗ ಮೊದಲು ನಾವು ನಿರ್ಣಯವನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಹಕ್ಕು ಚ್ಯುತಿ ನಿರ್ಣಯದ ಬಗ್ಗೆ ತಾವು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೀರಿ? ಅದು ನನಗೆ ಗೊತ್ತಿಲ್ಲದಿರುವುದರಿಂದ ನಾನು ಸುಮ್ಮನೆ ಕುಳಿತಿದ್ದೇನೆ. ನಾನು ಏತಕ್ಕೆ ಸುಮ್ಮನೆ ಕುಳಿತಿದ್ದೇನೆಂದರೆ, ತಾವು ಹಕ್ಕುಚ್ಯುತಿ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳುವುದಾದರೆ....

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಎಲ್ಲಿದ್ದೇವೆಂಬುದು ಬೇಕಲ್ಲಾ! ತಾವು ಯಾವ ವಿಷಯವನ್ನು ಎತ್ತುತ್ತಿದ್ದೀರಿ? ಯಾವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ, ಯಾರು ಏನು ಮಾತನಾಡುತ್ತಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ. ಈಗ ನಾವು ಶೂನ್ಯ ವಾತಾವರಣದಲ್ಲಿದ್ದೇವೆ. ಇದರ ಬಗ್ಗೆ ನಾವು ಏನು ತಿಳಿದುಕೊಳ್ಳಬೇಕು?

ಶ್ರೀ ಹೆಚ್.ಎನ್. ನಂಜೇಗೌಡ : ಅವರು ಮಂಡನೆ ಮಾಡುವುದಾದರೆ....

ಶ್ರೀ ಎಂ. ವೀರಪ್ಪಮೊಯಿಲಿ : ನಾವು ಈಗ ಶೂನ್ಯ ವಾತಾವರಣದಲ್ಲಿದ್ದೇವೆ.

ಅಧ್ಯಕ್ಷರು : ಇನ್ನು ಐದು ನಿಮಿಷ ಆದ ಮೇಲೆ ತಾವು ಎದ್ದರೆ ಯು ವಿಲ್ ಬಿ ಆನ್ ಎ ಬೆಟರ್....

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಸಭಾನಾಯಕರು ಹೇಳಿದ ಮೇಲೆ....

6.50 ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ : ಮೊದಲು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಬರಗಾಲದ ಬಗ್ಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ ಅದನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಅದೇ ರೀತಿ ಸನ್ಮಾನ್ಯ ಖರ್ಗೆಯವರು ನಾವು

ಸಹ ಕಳುಹಿಸಿದ್ದೇವೆ ತಡೆದುಕೊಳ್ಳಬೇಕೆಂದು ಹೇಳಿದರು. ಶ್ರೀಮಾನ್ ಬಂಗಾರಪ್ಪನವರು ಅದರ ಬಗ್ಗೆ ಚರ್ಚೆ ಮಾಡುತ್ತಾ ಇದ್ದರು, ಆದರೆ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ತೆಗೆದುಕೊಂಡು ಬೆಳಿಗ್ಗೆ ಸದನದ ಹೊರಗಡೆ ನಡೆದಂತಹ ವಿದ್ಯಮಾನ ಏನಿದೆ ಎಂದು ಅದರ ಬಗ್ಗೆ ಪ್ರಶ್ನೆ ಮಾಡಲಿಕ್ಕೆ ಪ್ರಾರಂಭ ಮಾಡಿದರು, ಆಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ಆ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಲಿಕ್ಕೆ ಹೋದರು. ನಾನು ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ, ಅದರ ವ್ಯಾಖ್ಯಾನ ಮಾಡಲಿಕ್ಕೆ ಹೋಗುವುದಿಲ್ಲ. ಆ ಕಾರಣದಿಂದ ಹೇಳಿದೆ. ಇನ್ನೂ ಈ ಸದನದ ಮುಂದೆ ಮಂಡನೇ ಆಗಿಲ್ಲ, ಇದರ ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದು ಏನು ಎಂದರೆ ಬರೆದಂತಹ ಕಾಗದಗಳನ್ನು ತೆಗೆದುಕೊಂಡು... ಅದು ಈ ಸಂದರ್ಭದಲ್ಲಿ ಸಾದುವಾದುದ್ದಲ್ಲ ಅಂಥ.

Mr Speaker : That is right.

Sri H.D. Devegowda : You have got every right to raise your objections. Speaker has to call the members concorned. Then you can raise whatever objections you went to raise.

ಶ್ರೀ ವಾಟಾಳ್ ನಾಗರಾಜ್ : ಬೆಳಿಗ್ಗೆ 11 ಗಂಟೆಗೆ ಸಭೆ ಸೇರಿದೇವಲ್ಲ ಅದನ್ನು ನಾನು ಹೇಳುತ್ತಾ ಇದ್ದೆ, ನಾನು ಮಾತನಾಡುವುದು ಬೇಡ ಅಂಥ ತಾವಾದರೂ ಹೇಳಬೇಕಲ್ಲ, ಬೆಳಿಗ್ಗೆ 11 ಗಂಟೆ ಸಭೆ ಏಕೆ ಸೇರಿತು, ಇಷ್ಟು ತಡ ಏಕೆ ಆಯಿತು, ಅಂಥ ಎಲ್ಲ ತಾವು ಹೇಳಬೇಕಲ್ಲ.

+ ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ಮೂಲಭೂತವಾದಂತಹ ಒಂದು ಪ್ರಶ್ನೆಯನ್ನು ಇವತ್ತು ಬಗೆಹರಿಸಬೇಕು, ಏಕೆಂದರೆ ಈ ಸದನ 11 ಗಂಟೆಗೆ ಸೇರಬೇಕಾಗಿತ್ತು ಪ್ರಶ್ನೋತ್ತರ ವೇಳೆಗೆ ಅನಂತರ ಮಾನ್ಯ ಉಪ ಸಭಾಧ್ಯಕ್ಷರು ಬಂದು ಇದನ್ನು ಮುಂದುವರೆಸಿದ್ದಾರೆ. ಆದರೆ ಈಗ ನಾವು ನಿಯಮ ಪ್ರಕಾರ ಪ್ರಶ್ನೋತ್ತರ ವೇಳೆಯನ್ನು ಒಂದು ವೇಳೆ ತಾವು ಏನು ಅದರ ಗತಿ ತೋರಿಸಿದ್ದೀರಿ ಅಂತ ಹೇಳಿ, ತಮಗೆ ಇನ್ನು ಪರಿಚಯವಾಗದೇ ಇವತ್ತು ಸನ್ಮಾನ್ಯ ವಿರೋಧಿ ಪಕ್ಷದ ನಾಯಕರು ಎದ್ದ ಕೂಡಲೇ ನಾನು ಅಡ್ಜನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ ಬರಗಾಲದ ಬಗ್ಗೆ ಚರ್ಚೆ ಮಾಡಬೇಕೆಂದು ಅವರು ಎತ್ತಿದರು, ಮತ್ತೊಂದು ಕಡೆ ಏಕೆ ಇಷ್ಟೊಂದು ತಡವಾಗಿ ಸಭೆ ಸೇರಿದ್ದು ಎಂದು, ಬಹುಶಃ ಇದೆಲ್ಲ ಪ್ರಸ್ತುತ ಅಲ್ಲ, ಈಗ ತಾವು ದಯಮಾಡಿ The House will have to be called to order. ಏಕೆಂದರೆ ಯಾರು ಏಕೋ ಅಂಥ ಎಲ್ಲರೂ ಕೂಡ ವಿಚಾರವನ್ನು ಎತ್ತಿಲಿಕ್ಕೆ ಪ್ರಶ್ನೋತ್ತರ ವೇಳೆ ಬಹುಶಃ ಅದು ಸಾಧುವಾಗುವುದಿಲ್ಲ, ನಿಯಮ ಪ್ರಕಾರ ಇಲ್ಲ, ಇಲ್ಲದೆ ಇದ್ದರೆ ಎಲ್ಲರೂ ಎಲ್ಲಾ ವಿಚಾರವನ್ನು ಪ್ರಾರಂಭವಾದಾಗಲೇ ಎತ್ತಿ ಬಿಟ್ಟರೆ I don't think you need to explain. why you have delayed it. That will come after question hour suspension. question hour suspend ಮಾಡಿದ ಮೇಲೆ, ಆಮೇಲೆ ಬೇಕಾದರೆ ಶೂನ್ಯ ವೇಳೆ ಬರುತ್ತದೆ. ಆದರೆ ಪ್ರಶ್ನೋತ್ತರ ವೇಳೆಯನ್ನು ಯಾವುದ್ದಕ್ಕಾಗಿ ರದ್ದು ಮಾಡುತ್ತೀರಿ ಅದಕ್ಕೂ ಕಾರಣಬೇಕಾಗುತ್ತದೆ. ಅಡ್ಜರ್ನ್‌ಮೆಂಟ್ ಮೋಷನ್ there is no question of lapse in the Rues. Under the rules, there is no question of lapse unless it is suspended whether it is called at 11 or at 3 or 6.30 or 10 p.m. No, it does not lapse. According to my understanding of the Rules, question hour stands unless it is suspended. No, I am sorry. It may be in

Lok Sabha, but under our Rules, it is still question hour unless it is suspended.

ಆದ್ದರಿಂದ ತಾವು ಸಸ್ಪೆಂಡ್ ಮಾಡಬೇಕಾದರೆ ಕಾರಣ ಕೊಡಬೇಕಾಗುತ್ತದೆ. ಆಗ ಕಾರಣ ಯಾವುದು ಎಂದು ಹೇಳಿ; ಇವತ್ತು ಕಾರಣ ಕೊಡಬೇಕಾದರೆ ಪ್ರಿವಿಲೇಜ್ ಮೋಷನ್ ಕಾರಣವೇ? ಅಥವಾ ಅಡ್ಜರ್ನ್‌ಮೆಂಟ್ ಮೋಷನ್ ಕಾರಣವೇ? ಎಂದು ಹೇಳಿ ತಾವು ನಿರ್ಣಯ ಮಾಡಿದ ಮೇಲೆ, ಸನ್ಮಾನ್ಯ ಸದಸ್ಯರಿಗೆ ಅಡ್ಜರ್ನ್‌ಮೆಂಟ್ ಮೋಷನ್ ಆದರೆ ಅವರು ಮೊದಲು ಯಾರು ಕೊಟ್ಟಿರುತ್ತಾರೆ ಅವರಿಗೆ ಅವಕಾಶ ಕೊಡಬೇಕಾಗುತ್ತದೆ. ಆದರೆ ಎಲ್ಲದ್ದಕ್ಕೂ ಕೂಡ ಪ್ರಿವಿಲೇಜ್ ಮೋಷನ್ ಪ್ರಶ್ನೋತ್ತರ ಅವಧಿ ಆದಕೂಡಲೇ ಆಧ್ಯತೆ ಸಿಗಬೇಕಾದಂಥದ್ದು ಪ್ರಿವಿಲೇಜ್ ಮೋಷನ್‌ಗೆ under the Rules and also under all the precedents and also under Kaul & Shakdher. ಆದ್ದರಿಂದ ಪ್ರಿವಿಲೇಜ್ ಮೋಷನ್‌ಗೆ ತಾವು ಅವಕಾಶ ಕೊಡಬೇಕಾಗುತ್ತದೆ. ಆಮೇಲೆ ಅಡ್ಜರ್ನ್‌ಮೆಂಟ್ ಮೋಷನ್ ಪ್ರಶ್ನೆ ಬರುತ್ತದೆ. ಆದ್ದರಿಂದ my appeal to you, the House will have to be called to order and you may kindly adopt the procedure which is prescribed under the Rules. ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಬೇಕು ಎಂದು ತಮ್ಮದು ಅಥವಾ ಸದನದ ಅಭಿಪ್ರಾಯವಾದರೆ ಅದನ್ನು ಮಾಡಿ, ಇಲ್ಲದಿದ್ದರೆ ಪ್ರಶ್ನೋತ್ತರ ವೇಳೆಗೆ ಅವಕಾಶವನ್ನು ಮಾಡಿ ಕೊಡಬೇಕಾಗುತ್ತದೆ. ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಬೇಕಾದರೆ ಕಾರಣ ಏನು ಎಂದು ಹೇಳಿ, ಇದನ್ನು ಪ್ರಿವಿಲೇಜ್ ಮೋಷನ್‌ಗೆ ತಾವು ಅವಕಾಶ ಇದ್ದರೆ ಪ್ರಿವಿಲೇಜ್ ಮೋಷನ್‌ಗೆ ನಿಯಮದ ಪ್ರಕಾರ ಅವಕಾಶವಿದ್ದರೆ ಅದಕ್ಕೆ ಅವಕಾಶ ಕೊಡಬೇಕಾಗುತ್ತದೆ.

ನಿಯಮದ ಪ್ರಕಾರ ಇಲ್ಲದಿದ್ದರೆ, ನಿಯಮದ ಪ್ರಕಾರ ಪ್ರಿವಿಲೇಜ್ ಮೋಷನ್ ಇಲ್ಲ ಆದರೆ ದೂರ ಔಟ್ ನಿಯಮದ ಪ್ರಕಾರ ಇಲ್ಲದಿದ್ದರೆ, ನಿಯಮದ ಪ್ರಕಾರ ಪ್ರಿವಿಲೇಜ್ ಮೋಷನ್ ಇಲ್ಲ ಆದರೆ ರೂಲ್ ಔಟ್ ಮಾಡುತ್ತೇನೆ ಎಂದು ಹೇಳಿ ಅದನ್ನು set a side ಮಾಡಿಕೊಂಡು ತಾವು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ಅದು ಮಾಡದೆ ಇವತ್ತು ಒಂದೇ ರೀತಿ in a vacuum, I don't think the House should function. This is my main fundamental objection for the entire proceedings which is being held. ಆದ್ದರಿಂದ ಯಾವುದು ವಿಚಾರ ಬಂತು I don't think those things can go on record. It is not according to Rules.

Mr. Speaker : The House is very much in order. The Hon. Deputy Speaker had been in the Chair and he has adjourned the House. The convention of the House is that the first hour is devoted for the Question Hour. Since we were not able to transact any business in the first hour, for the reasons known to all of us, the Question Hour islapsed. Mr. Yediyurappa, Hon. Leader of Oppositions, was well within his rights to point out regarding notice he had given for moving Adjournment Motion. In the best of our wisdom, we have decided to convert it under Rule 69. Because there was no way that I could have taken up both preliminary discussions on adjournment motion and privilege motion. According to the Rules of the House, once the question hour is over, if there is a notice given under Rule 191 for moving the motion for breach of privilege, the duty demands that I should take up the motion for consideration. So, the House is in order. Now I think, we will move on to take up notice given under Rule 191.

Sri H.N. Nanjegowda : I am on a point of order. If it is a preliminary objection before moving the Motion, I have no objection. But if you permitting to move the motion then I have got objection. ಅವರು ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿ.

Mr. Speaker : The procedure is, ನಮ್ಮಲ್ಲಿ ನಿಯಮ 191ರ ಕೆಳಗೆ ಅವರು ನೋಟೀಸ್ ಕೊಟ್ಟಿರುತ್ತಾರೆ, ಅವರು ನೋಟೀಸ್ ಕೊಟ್ಟಾಗ, ಈ ಸೂಚನೆಗಳು ಕ್ರಮಬದ್ಧವಾಗಿ ಇವೆಯೋ ಇಲ್ಲವೋ? ಎನ್ನತಕ್ಕಂತದ್ದನ್ನು ನಾವು ನೋಡಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಅದು ಆದ ಮೇಲೆ ಉಳಿದ ವಿಚಾರಗಳು. ಈಗ ಶ್ರೀರಾಮರೆಡ್ಡಿಯವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಒಂದು ನಿಮಿಷ ಶ್ರೀ ಶ್ರೀರಾಮರೆಡ್ಡಿಯವರು ಮುಂದುವರೆಸುವುದಕ್ಕೆ ಮೊದಲು, ನಮ್ಮ ಕಛೇರಿಗೆ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ನಿಯಮ 191ರ ಕೆಳಗೆ ನಾಲ್ಕು ಸೂಚನೆಗಳು ಬಂದಿವೆ. ಈ ಕೆಳಕಂಡಂತಹ ಸನ್ಮಾನ್ಯ ಸದಸ್ಯರುಗಳು ಸಹಿ ಹಾಕಿದ್ದಾರೆ. ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು, ಸನ್ಮಾನ್ಯ ಕೆ.ಎನ್. ನಾಗೇಗೌಡರು, ಸನ್ಮಾನ್ಯ ಶ್ರೀ ಬಂಗಾರಪ್ಪನವರು, ಸನ್ಮಾನ್ಯ ಯು.ಆರ್. ಸಭಾಪತಿಯವರು, ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು, ಶ್ರೀ ಎಂ. ಬಸಪ್ಪನವರು, ಶ್ರೀ ವೀರಪ್ಪಮೊಯಿಲಿಯವರು, ಶ್ರೀ ಕಾಗೋಡು ತಿಮ್ಮಪ್ಪನವರು, ಶ್ರೀ ಬಿ. ಶಿವರಾಮುರವರು, ಶ್ರೀ ಎಸ್.ಬಿ. ಮುದ್ದಹನುಮೇಗೌಡರು, ಶ್ರೀ ಎ.ಟಿ. ರಾಮಸ್ವಾಮಿಯವರು, ಡಿ.ಆರ್. ಪಾಟೀಲ್‌ರವರು, ಶ್ರೀ ಆರ್. ನಾರಾಯಣ್‌ರವರು, ಶ್ರೀ ಜಗದೀಶ್ ಟಿ. ಪಾಟೀಲರು ಇಷ್ಟು ಜನ ಸಹಿ ಹಾಕಿ ನಮಗೆ ಕಳುಹಿಸಿ ಕೊಟ್ಟಿದ್ದಾರೆ. ಇದರಲ್ಲಿ ಶ್ರೀ ಶ್ರೀರಾಮರೆಡ್ಡಿಯವರ ಸೂಚನೆ ಮೊದಲು ಬಂದಿದೆ. ಅವರು ನಿಯಮ 191ರ ಪ್ರಕಾರ ಪ್ರಸ್ತಾಪ ಮಾಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಸದನದ ನಿಯಮಾವಳಿಯ 191ರ ಪ್ರಕಾರ ಸೂಚನೆಯನ್ನು ಕಳುಹಿಸಿದ್ದೇನೆ, ಅದನ್ನು ಈಗ ಮಂಡಿಸುತ್ತಾ ಇದ್ದೇನೆ. ವಿಷಯ ಈ ರೀತಿ ಇದೆ. ಮಾನ್ಯ ಯಡಿಯೂರಪ್ಪ, ವಿರೋಧ ಪಕ್ಷದ ನಾಯಕರು ಇವರ ಮೇಲೆ ಕರ್ನಾಟಕ ವಿಧಾನ ಮಂಡಲದ ನಿಯಮಾವಳಿಯ 191ರ ಪ್ರಕಾರ ಹಕ್ಕು ಚ್ಯುತಿಯನ್ನು ಮಂಡಿಸುವುದರ ಬಗ್ಗೆ ಸೂಚನೆ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ಪರಿಗಣನೆಗಾಗಿ ತರಲಿಚ್ಛಿಸುವುದೇನೆಂದರೆ, ವಿಧಾನ ಸಭೆಯಲ್ಲಿ ಮಾನ್ಯತೆ ಪಡೆದ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪ....

Sri H.N. Nanjegowda : I am sorry, I cannot often and often Interfere. ನೀವು ಪದೇ ಪದೇ ಹೇಳುತ್ತಾ ಇರುತ್ತೀರಿ ಅನುಭವಸ್ಥರು ಎಂದು ನಮಗೆ ಇದು ಒಂದು ಕಷ್ಟ. ಈಗ ಇದು ಮಂಡನೆ ಎಂದು ಹೇಳುತ್ತಾ ಇದ್ದಾರೆ. ಏಕೆಂದರೆ, ನಮಗೆ ನೋಟೀಸ್ ಏನು ಎಂದು ಗೊತ್ತಿಲ್ಲ, ಅದು ನೋಟೀಸ್‌ಗೆ ಆಧಾರ ಏನು ಎಂದು ಗೊತ್ತಿಲ್ಲ, ಈ ಪ್ರಸ್ತಾವನೆ ಅಂದರೆ ನೋಟೀಸ್‌ಗೆ ಆಧಾರ ಏನಿದೆ? ಈ ಕಾರಣಕ್ಕಾಗಿ ನಾನು ಒಂದು ಪ್ರಸ್ತಾವನೆಯನ್ನು ಕಳುಹಿಸಿದೆ ಎಂದು ಹೇಳಿ, ಅವರು ಓದಿದರೆ ಹಾಗೆ ಆಗುವುದಿಲ್ಲ ಅದು. ಪ್ರಸ್ತಾವನೆ ಮಾಡುವಾಗ ಓದುವ ಹಾಗಿಲ್ಲ. ಅದು ಮಂಡನೆ ಮಾಡಿದಂತಾಗಿ ಬಿಡುತ್ತದೆ. ಬಂಗಾರಪ್ಪನವರು ಹಿಂದೆಗಡೆಯಿಂದ ಕುಳಿತುಕೊಂಡು ಓದಿ ಬಿಡು ಎಂದು ಹೇಳಿ ಕೊಡುತ್ತಾ ಇದ್ದಾರೆ. ಹಾಗೆ ಆಗುವುದಿಲ್ಲ.

ಅಧ್ಯಕ್ಷರು : ತಾವು ಏನು ಕ್ರಿಯಾಲೋಪ ಎತ್ತಬೇಕೆಂದಿದ್ದೀರಿ ಎನ್ನುವುದರ ಬಗ್ಗೆ ನನಗೆ ಕಲ್ಪನೆ ಇದೆ. ಅವರು ಹೇಳಿದ ಮೇಲೆ ಕ್ರಿಯಾಲೋಪ ಎತ್ತಿದರೆ ಅದಕ್ಕೆ ಹೆಚ್ಚು ಶಕ್ತಿ ಬರಬಹುದು. ಐದು ನಿಮಿಷ ಬಿಟ್ಟು ಕ್ರಿಯಾಲೋಪ ಎತ್ತಿ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಮುಖಂಡರು ತಾರೀಖು 11-8-1995ರ ಪತ್ರಿಕೆಗಳಲ್ಲಿ ಬಂದಂತ ವಿಷಯದ ಆಧಾರದ ಮೇಲೆ ಅವರು ಮಾಡಿರತಕ್ಕ ಆಪಾದನೆಗಳು ಈ ಸದನದಲ್ಲಿ ಸಭಾಧ್ಯಕ್ಷರು ನೀಡಿದ ತೀರ್ಪನ್ನು ಪ್ರಶ್ನಿಸುವಂತಹ ರೀತಿಯಲ್ಲಿ ಸದನದ ಹೊರಗೆ ಮಾತನಾಡಿ ಸಭಾಧ್ಯಕ್ಷರ ಸ್ಥಾನದ ಘನತೆ ಗೌರವ ಮತ್ತು ಆ ಸ್ಥಾನದ ಮಹತ್ವಕ್ಕೆ ಅಗೌರವ ತೋರಿಸಿದ್ದಾರೆ. ಹಾಗೆಯೇ ಸದನದಲ್ಲಿ ಚರ್ಚೆಯಾಗಿ ತೀರ್ಮಾನವಾದ ವಿಷಯಗಳನ್ನು ಸದನದ ಹೊರಗಡೆ ಪ್ರಸ್ತಾಪ ಮಾಡಿ ಇಡೀ ಸದನದ ಗೌರವಕ್ಕೆ ಚ್ಯುತಿ ತಂದಿದ್ದಾರೆ. ಇದು ಸದನದ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ಸದನದ ನಿಯಮ 191ರ ಪ್ರಕಾರ ಹಕ್ಕುಚ್ಯುತಿ ಮಂಡಿಸಲು ನನಗೆ ತಾವು ಅವಕಾಶ ಮಾಡಿಕೊಡಬೇಕಾಗಿ ವಿನಂತಿಸುತ್ತಿದ್ದೇನೆ. ಇದಕ್ಕೆ ಪೂರಕವಾದ ಸಂಬಂಧಪಟ್ಟ ದಾಖಲೆಗಳನ್ನು ನಾನು ತಮ್ಮ ಕಛೇರಿಗೆ ಈಗಾಗಲೇ ಕಳುಹಿಸಿಕೊಟ್ಟಿದ್ದೇನೆ. ನಾನು ಮಂಡನೆ ಮಾಡಿರತಕ್ಕ ಈ ನಿರ್ಣಯಕ್ಕೆ ಪೂರಕವಾಗಿರತಕ್ಕ ನನಗೆ ಲಭ್ಯವಿದ್ದ ಕೆಲವು ದಾಖಲೆಗಳನ್ನು ತಮ್ಮ ಕಛೇರಿಗೆ ಕಳುಹಿಸಿಕೊಟ್ಟಿದ್ದೇನೆ. ಇದರಲ್ಲಿ ಮುಖ್ಯವಾಗಿ ಮೂರು ಅಂಶಗಳು ಅಡಕವಾಗಿದೆ....

ಶ್ರೀ ಎಸ್. ಬಂಗಾರಪ್ಪ : ಉಳಿದ ನಿರ್ಣಯಗಳು ಮಂಡನೆಯಾಗಲಿ, ಆಮೇಲೆ ಮಾತನಾಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೊದಲನೆಯದು, 11ನೇ ತಾರೀಖು ಪತ್ರಿಕೆಗಳಲ್ಲಿ ಬಂದಂತಹ ದಾಖಲೆಗಳನ್ನು ನಾನು ತಮ್ಮ ಕಛೇರಿಗೆ ಕಳುಹಿಸಿದ್ದೇನೆ. ನನಗೆ ಲಭ್ಯವಿದ್ದ ದಾಖಲೆಗಳನ್ನು ಮತ್ತು ಪತ್ರಿಕಾ ವರದಿಗಳನ್ನು ತಮ್ಮ ಕಛೇರಿಗೆ ಕಳುಹಿಸಿಕೊಟ್ಟಿದ್ದೇನೆ. ಇದರಲ್ಲಿ ಮುಖ್ಯವಾಗಿ ಮೂರು ಅಂಶಗಳು ಇವೆ. ಮೊದಲನೆಯದು ಈ ಸದನದ ಸಭಾಧ್ಯಕ್ಷರ ಸ್ಥಾನಕ್ಕೆ ಅಗೌರವ ತರತಕ್ಕ ಅಂಶ ಒಂದು ಇದರಲ್ಲಿ ಅಡಕವಾಗಿದೆ. ಎರಡನೆಯದು, ಅಪರಾಧಿಗಳನ್ನು, ಕ್ರಿಮಿನಲ್ಸ್ ಅನ್ನು ಈ ಸದನದಲ್ಲಿ ರಕ್ಷಣೆ ಮಾಡತಕ್ಕ ಜನರಿದ್ದಾರೆಂದು ಹೇಳತಕ್ಕ ಒಂದು ಆಪಾದನೆ ಇದೆ. ಮೂರನೆಯದು, ಎರಡು ರಾಜಕೀಯ ಪಕ್ಷಗಳಿಗೆ ಸಂಬಂಧಪಟ್ಟ ಅಂಶ ಇದೆ.

ಅವರು ಸರ್ಕಾರದ ಜೊತೆ ಶಾಮೀಲಾಗಿದ್ದಾರೆಂದು ಇದೆ. ಈ ತಿಂಗಳ ಪ್ರಾರಂಭದಲ್ಲಿ ಅಂದರೆ, ಈ ತಿಂಗಳ 7ನೇ ತಾರೀಖು ಪ್ರಾರಂಭವಾದಂಥ ಈ ಅಧಿವೇಶನದ ಪ್ರಥಮ ದಿನ ಸನ್ಮಾನ್ಯ ವಿರೋಧ ಪಕ್ಷದ ಮುಖಂಡರು ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದರು. ಆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ.... ನಮಗೆ ರಕ್ಷಣೆ ಕೊಡಬೇಕು ಶ್ರೀ ವಾಟಾಳ್ ನಾಗರಾಜು ಅವರಿಂದ.

ಶ್ರೀ ವಾಟಾಳ್ ನಾಗರಾಜ್ : ನಾನು, ಯಾವುವು ಆ ಎರಡು ಪಕ್ಷಗಳ ಹೆಸರು ಹೇಳಿ ಎಂದರೆ ನನಗೆ ರಕ್ಷಣೆ ಕೊಡಬೇಕು ಎನ್ನುತ್ತಾರೆ. ಅವರು ಕಮ್ಯುನಿಸ್ಟ್ ಪಕ್ಷದವರು ಮಂಡಿಸುತ್ತಾ ಇರತಕ್ಕ ಹಕ್ಕುಚ್ಯುತಿ. ಎರಡು ಪಕ್ಷಗಳು ಅಂದರೆ ಅವರ ಪಕ್ಷವೇ ಅಥವಾ ಬೇರೆ ಪಕ್ಷವೆ ಹೇಳಿ ಅಂದರೆ ನಮಗೆ ರಕ್ಷಣೆ ಕೊಡಿ ಅನ್ನುತ್ತಾರೆ.

ಅಧ್ಯಕ್ಷರು : ನಿಮ್ಮ ಒಕ್ಕೂಟದಲ್ಲಿ ಭಿನ್ನ ಮತ ಬಂದಿದೆಯಲ್ಲ?

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಈ ಸದನದಲ್ಲಿರತಕ್ಕ ಎಲ್ಲಾ ಸದಸ್ಯರ ಮತ್ತು ಈ ಸದನದ ಪ್ರಶ್ನೆ ಇಲ್ಲಿರತಕ್ಕದ್ದು. ಅದರ ವಿವರಗಳನ್ನು ಹೇಳುತ್ತೇನೆ, ಯಾವ ಯಾವ ಸಂದರ್ಭದಲ್ಲಿ ಏನೇನು ಹೇಳಿದ್ದಾರೆಂದು ಹೇಳುತ್ತೇನೆ. ಅದಕ್ಕೆ ದಯವಿಟ್ಟು ಹಿರಿಯ ಸದಸ್ಯರು ಸಹಕಾರ ಕೊಡಬೇಕೆಂದು ಕಳಕಳಿಯಿಂದ ವಿನಂತಿಸುತ್ತಿದ್ದೇನೆ. ನಾವು ಹೊಸಬರು. ಅವರು ಹಿರಿಯ ಸದಸ್ಯರು ಇದ್ದಾರೆ. ನಮಗೆ ಅವರು ಸಹಕಾರ ಕೊಡಬೇಕು, ಪ್ರೋತ್ಸಾಹ ಕೊಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ. 7ನೇ ತಾರೀಖು ಮಂಡಿಸಿದಂತಹ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ, ಸರ್ಕಾರದ ಮೇಲೆ ಹಲವಾರು ಅಪವಾದಗಳನ್ನು ಮತ್ತು ಕೆಲವು ವಿಷಯಗಳನ್ನು ಪ್ರಸ್ತಾಪಕ್ಕೆ ತಂದಂಥ ಸಂದರ್ಭದಲ್ಲಿ ಮತ್ತು ಸರ್ಕಾರದ ವೈಫಲ್ಯದ ಬಗ್ಗೆ ಮಾತನಾಡಿದಂತಹ ಸಂದರ್ಭದಲ್ಲಿ ಕೆಲವು ಆರೋಪಗಳನ್ನು ವಿರೋಧ ಪಕ್ಷದ ಮುಖಂಡರು ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಹಕ್ಕುಚ್ಯುತಿ ನಿರ್ಣಯವನ್ನು ಯಾರ್‍ಯಾರು ಕಳುಹಿಸಿದ್ದಾರೆಂದು ಹೇಳಿದಿರಿ. ಒಂದೇ ಸಾರಿ ಅವರೆಲ್ಲರೂ ಮಂಡಿಸತಕ್ಕದ್ದು ಒಂದು ವಿಧಾನ. ಆದಾದ ನಂತರ ಚರ್ಚೆಗೆ ಬರತಕ್ಕದ್ದು. ಈಗ ಇವರು ನೇರವಾಗಿ ಚರ್ಚೆಗೆ ಹೊರಟರು. ಚರ್ಚೆಯನ್ನು ಪ್ರಾರಂಭ ಮಾಡಿದ್ದಾರೆ. ತಾವು 12Ë13 ಜನರ ಹೆಸರು ಹೇಳಿದ್ದೀರಿ. ಅವರೆಲ್ಲರೂ ನಿರ್ಣಯವನ್ನು ಮಂಡಿಸುವುದಕ್ಕೆ ಅವಕಾಶ ಕೊಟ್ಟು ಆಮೇಲೆ ಚರ್ಚೆ ಪ್ರಾರಂಭವಾಗಲಿ.

ಶ್ರೀ ಎಸ್. ಬಂಗಾರಪ್ಪ : ಮೊದಲು ನಿರ್ಣಯ ಮಂಡನೆಯಾಗಿ ಬಿಟ್ಟರೆ ಒಳ್ಳೆಯದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ನಿರ್ಣಯವನ್ನು ಮಂಡಿಸಿ ಪ್ರಿಲಿಮಿನರಿಯಾಗಿ ಹೇಳುತ್ತಿದ್ದೇನೆ. ನಾನು ಚರ್ಚೆಯನ್ನು ಪ್ರಾರಂಭ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಚರ್ಚೆ ಆರಂಭವಾಯಿತು. ಪಕ್ಷಗಳ ಹೆಸರು ಹೇಳುತ್ತಿದ್ದಾರೆ. ನಿಮಗೆ ಅಗೌರವ ಆದದ್ದು ಹೇಳುತ್ತಿದ್ದಾರೆ. ಪತ್ರಿಕೆಗಳಲ್ಲಿ ಬಂದದ್ದು ಹೇಳಿದ್ದಾರೆ. ಆದುದರಿಂದ ಚರ್ಚೆ ಆರಂಭವಾಯಿತು. ಆದಕಾರಣ ನಾನು ಏನು ಹೇಳುತ್ತೇನೆಂದರೆ, ಮಿಕ್ಕವರು ಯಾರ್‍ಯಾರು ನಿರ್ಣಯ ಮಂಡಿಸುವವರಿದ್ದಾರೆ ಅವರೂ ಕೂಡ ಮಂಡಿಸಲಿ. ನಂತರ ಅವರೇ ಚರ್ಚೆಯನ್ನು ಪ್ರಾರಂಭ ಮಾಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಚರ್ಚೆಯನ್ನು ಪ್ರಾರಂಭ ಮಾಡಿಲ್ಲ. ನಮಗೆ ಇವರು ಹೇಳುವುದಕ್ಕೆ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು : ಬೇಗ ಮುಗಿಸಿ, ಇನ್ನೂ ಬಹಳಷ್ಟು ಜನ ಸದಸ್ಯರು ಮಾತನಾಡುವವರು ಇದ್ದಾರೆ.

(ಶ್ರೀ ಬಂಗಾರಪ್ಪನವರು ಮಾತನಾಡಲು ನಿಂತಾಗ ಮೈಕ್ ಸ್ವಿಚ್ ಆಫ್ ಆಗಿತ್ತು)

ಅಧ್ಯಕ್ಷರು : ವಾಟಾಳ್ ನಾಗರಾಜ್ ಅವರೇ ಆಫ್ ಮಾಡಿದರೋ ಏನೋ ನೋಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಈಗ ಹಕ್ಕುಚ್ಯುತಿಯನ್ನು ಯಾರ ಮೇಲೆ ತರಬೇಕು? ನಾನು ಗಂಭೀರವಾಗಿ ಕುಳಿತಿದ್ದೇನೆ. ನಾನು ಏನೋ ಮಾಡಿದೆ ಎಂದು ಹೇಳುವುದು ಇದೆಲ್ಲ ಸರಿಯಲ್ಲ. ತಮ್ಮ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡಿದ್ದೇನೆ. ನನ್ನ ಮೇಲೆ ಈ ರೀತಿ ಕಾಡುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿರತಕ್ಕದ್ದರಲ್ಲಿ ಅರ್ಥ ಇದೆ ಎಂದು ನಾನು ಭಾವಿಸಿದ್ದೇನೆ. ತಾವು ಒಪ್ಪಿಗೆ

ಕೊಟ್ಟಿರತಕ್ಕ ವಿಷಯಕ್ಕೆ ತಮ್ಮ ಸಮ್ಮತಿ ಬೇಕೇ ಬೇಕು. ಅಧು ಗೊತ್ತಿರುವುದರಿಂದ ರೆಡ್ಡಿ ಅವರು ನಿರ್ಣಯದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚೆ ನಿರ್ಣಯವನ್ನು ಮಂಡನೆ ಮಾಡಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರಾದ ಶ್ರೀ ನಾಗೇಗೌಡರು ನಿರ್ಣಯವನ್ನು ಮಂಡಿಸಬೇಕು. ಮಾನ್ಯ ಪಾರ್ಲಿಮೆಂಟ್ ಪ್ರೊಸೀಜರ್ ಹೇಳುತ್ತಿದ್ದೀರಿ, ನಾವು ಇಲ್ಲಿಯ ಪ್ರೊಸೀಜರ್ ಅನ್ನು ಹೇಳುತ್ತಿದ್ದೇವೆ. ಮಾನ್ಯ ನಾಗೇಗೌಡರು ಪ್ರಸ್ತಾಪ ಮಾಡಿದರೆ ಅದು ಸದನದ ಸ್ವತ್ತು ಆಗುತ್ತದೆ. ಅದೇ ರೀತಿ ನಾವು ಕಳುಹಿಸಿರತಕ್ಕದ್ದು ಕೂಡ ಸದನದ ಸ್ವತ್ತು ಆಗುತ್ತದೆ. ಕಾಂಗ್ರೆ ಪಕ್ಷದ ವತಿಯಿಂದ ಮಾನ್ಯ ಸದಸ್ಯರು ಕಳುಹಿಸಿರತಕ್ಕದ್ದು ಆಗುತ್ತದೆ. ಈ ನಾಲ್ಕು ಬಂದರೆ ನಂತರ ಚರ್ಚೆಗೆ ಕರೆದರೆ ಒಳ್ಳೆಯಾಗುತ್ತದೆಂದು ನನ್ನ ಭಾವನೆ.

ಶ್ರೀ ಕೆ.ಎನ್. ನಾಗೇಗೌಡ : ನಮ್ಮ ಸದನದ ನಿಯಮದ ಪ್ರಕಾರ, ಪ್ರಿವಿಲೇಜ್ ಮೋಷನ್ ವಿಚಾರದಲ್ಲಿ ತಮಗೆ ಎರಡು ಅಧಿಕಾರ ಇದೆ. ತಮಗೆ ಒಂದೇ ನೋಟೀಸ್ ಬಂದಂಥ ಸಂದರ್ಭದಲ್ಲಿ ನೇರವಾಗಿ ಪ್ರಿವಿಲೇಜ್‌ಗೆ ಬರುತ್ತದೆಯೋ ಇಲ್ಲವೋ ಎಂದು ತಮ್ಮ ಪ್ರಿಲಿವಾನರಿ ಅಭಿಪ್ರಾಯ ಕೊಡಿ ಎಂದು ಕರೆಯುವುದಕ್ಕೆ ತಮಗೆ ಅಧಿಕಾರ ಇದೆ. ರೂಲ್ಸ್ ಒಳಗೆ ಎಲ್ಲಾ ಅವಕಾಶ ಇದೆ. 3Ë4 ನೋಟೀಸ್‌ಗಳು ಒಂದೇ ವಿಚಾರದಲ್ಲಿ ಬಂದಾಗ 3-4 ಜನರ ಅಭಿಪ್ರಾಯ ಕೇಳಿ ಇದು ಪ್ರಿವಿಲೇಜ್‌ಗೆ ಬರುತ್ತದೆಂದು ತಮ್ಮ ಮನಸ್ಸಿಗೆ ಬಂದರೆ ಅದನ್ನು ಅಡ್ಮಿಟ್ ಮಾಡಿ ನಂತರ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡತಕ್ಕದ್ದು ಸೆಕೆಂಡ್ ಪ್ರೊಸೀಜರ್.

ಆದ್ದರಿಂದ ಏನು ಬಂಗಾರಪ್ಪನವರು ಮತ್ತು ವಾಟಾಳ್ ಅವರು ಹೇಳಿದ್ದಾರೆ ಅದು ಸೂಕ್ತವಾಗಿಲ. ನಾಲ್ಕು ಜನ ಯಾರು ನೋಟೀಸ್ ಕೊಟ್ಟಿದ್ದಾರೆ ಅವರು ನಾಲ್ಕು ಜನರನ್ನು ಪೂರ್ವಭಾವಿಯಾಗಿ ನಿಯಮ 191ರೊಳಗೆ ಇದು ಪ್ರಿವಿಲೈಜನ್ನು ಅಟ್ರ್ಯಾಕ್ಟ್ ಮಾಡುತ್ತದೆಯೇ ಇಲ್ಲವೋ ಎಂಬುದನ್ನು ತಾವು ಗಮನದಲ್ಲಿಟ್ಟುಕೊಂಡು ಆಮೇಲೆ ನಮಗೆ ಹೇಳಿದರೆ, ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ ಎಂದು ಹೇಳಿದರೆ ಸೂಕ್ತವಾಗುತ್ತದೆಂದು ನನಗನ್ನಿಸುತ್ತದೆ. ನಾಲ್ಕು ಬಂದಿದ್ದರಿಂದ, ಒಂದೇ ನೋಟೀಸ್ ಇದ್ದರೆ ತಾವು ಏನು ಪ್ರೊಸೀಜರ್ ಅಡಾಪ್ಟ್ ಮಾಡಿದ್ದೀರೋ ಅದು ಸರಿ ಇದೆ ಎಂದು ಅನ್ನಿಸುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಭಾಧ್ಯಕ್ಷರೆ, ನಾನು ನಿರ್ಣಯವನ್ನು ಮಂಡನೆ ಮಾಡಿ ಅದಕ್ಕೆ ಪೂರಕವಾಗಿ ಬೇಕಾಗಿರತಕ್ಕ ಅಂಶಗಳನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಮುಖ್ಯವಾಗಿ ಮಾನ್ಯ ಸಭಾಧ್ಯಕ್ಷರೆ, ಸದನದಲ್ಲಿ 9ನೇ ತಾರೀಖು ತಾವು ಕೊಟ್ಟಂಥ ತೀರ್ಪನ್ನು ಪ್ರಶ್ನೆ ಮಾಡತಕ್ಕ ರೀತಿಯಲ್ಲಿ ಸದನದ ಹೊರಗೆ ಮಾನ್ಯ ವಿರೋಧ ಪಕ್ಷಧ ಮುಖಂಡರು ಅದನ್ನು ಎತ್ತಿದ್ದಾರೆ. ನಾನು ಅದನ್ನು ಓದುತ್ತೇನೆ. ಇದು 11ನೇ ತಾರೀಖು ಬಂದಿದೆ.

'Opposition Leader in the Assembly B.S. Yediyurappa has claimed that he had in his possession "convinving evidence" to prove that Minister of STate for Bangalore Devlopment Rodhan Baig had a nexus with notorious rowdies and criminal eelements. He told media person here on Thuresday that he will hand over all the evidence against the inister to Speaker Ramesh Kumar and Prevail upon him to puruse same to a logical end. Mr. Yediyurappa maintained that the video casstette he had given to the Speaker was enough evidence to prove the charges against Minister but there were several other

factors like the circumstances of the videeo recording, the owners of the STD booth and the links they had with the Minister.

Mr. Yediyurappa, whose material evidence against the Minister was rejected by the Speaker on Wednesday, said that though he wanted to explain every background about the Minister's criminal track record, in order to respect and honour the Speaker's rulings he did not pursue the same.

Mr.Yediyurappa said he will try to persuade the Speaker to allow the ppress to view th vido rcoding of Mr. Baig in (Speaker) chamber.......

ಸದನದ ಒಳಗಡೆ ಸಭಾಧ್ಯಕ್ಷರು ನೀಡಿರತಕ್ಕ ತೀರ್ಪಿನ ಬಗ್ಗೆ ಅದನ್ನು ಪ್ರಶ್ನೆ ಮಾಡತಕ್ಕ ರೀತಿಯಲ್ಲಿ ಸದನದ ಹೊರಗಡೆ ಪ್ರಶ್ನೆ ಮಾಡಿರತಕ್ಕಂಥದ್ದು ನಮ್ಮ ಸದನದ ನಿಯಮಾವಳಿಗಳ ಪ್ರಕಾರ ಈ ಸದನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರತಕ್ಕ ಮತ್ತು ಈ ಸದನದ ಅತ್ಯುನ್ನತ ಸ್ಥಾನವಾಗಿರತಕ್ಕ ಆ ಸಭಾಧ್ಯಕ್ಷರ ಒಂದು ಸ್ಥಾನದ ಬಗ್ಗೆ ಸನ್ಮಾನ್ಯ ಯಡಿಯೂರಪ್ಪನವರು ಪ್ರಶ್ನೆ ಮಾಡಿರತಕ್ಕಂಥದ್ದು ನಮ್ಮ ಸದನದ ನಿಯಮಾವಳಿಗಳ ಪ್ರಕಾರ ಈ ಸದನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರತಕ್ಕ ಮತ್ತು ಈ ಸದನದ ಅತ್ಯುನ್ನತ ಸ್ಥಾನವಾಗಿರತಕ್ಕ ಆ ಸಭಾಧ್ಯಕ್ಷರ ಒಂದು ಸ್ಥಾನದ ಬಗ್ಗೆ ಸನ್ಮಾನ್ಯ ಯಡಿಯೂರಪ್ಪನವರು ಪ್ರಶ್ನೆ ಮಾಡಿರತಕ್ಕಂಥದ್ದು ಈ ಸಭಾಧ್ಯಕ್ಷರ ಸ್ಥಾನಕ್ಕೆ ಮಾಡಿರತಕ್ಕ ಒಂದು ಹಕ್ಕಿನ ಚ್ಯುತಿ ಮತ್ತು ಅಗೌರವವಾಗಿದೆ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಅದು ಒಂದು. ಮತ್ತೆ ಅದೇ ರೀತಿಯಲ್ಲಿ ಹೇಳಿಕೆಗಳನ್ನು ಮುಂದುವರೆಸಿದ್ದಾರೆ. ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ ಅವರು. "ಕ್ರಿಮಿನಲ್‌ಗಳೊಂದಿಗೆ ಸಂಪರ್ಕ ಇಟ್ಟುಕೊಂಡಿರುವ ಸಚಿವ ರೋಷನ್ ಬೇಗ್ ಅವರ ವಿರುದ್ಧ ಇನ್ನಷ್ಟು ದಾಖಲೆಗಳನ್ನು ಸಂಗ್ರಹಿಸಿ ಮುಂದಿನ ಕಾರ್ಯತಂತ್ರ ರೂಪಿಸುವುದಾಗಿಯೂ ಅವರು ಹೇಳಿದರು. ರೌಡಿ ಕೋಳಿ ಫಯಾಜ್‌ನ ಶವಸಂಸ್ಕಾರದ ಸಂದರ್ಭದಲ್ಲಿ ಸಚಿವ ಬೇಗ್ ಹಾಜರಿದ್ದುದನ್ನು ಮುಖ್ಯಮಂತ್ರಿಗಳು ಪತ್ರಿಕಾ ಸಂದರ್ಶನ ಕಾರ್ಯಕ್ರಮದಲ್ಲಿ ಆಕ್ಷೇಪಿಸಿ ಇದನ್ನು ಸಮರ್ಥನೆ ಮಾಡಿಕೊಳ್ಳುವುದಿಲ್ಲ ಎಂದಿದ್ದಾರೆ. ಆದರೆ ಅದೇ ಸದನದ ಒಳಗಡೆ ಇದರ ಬಗ್ಗೆ ಸಮರ್ಥಿಸಿಕೊಂಡಿದ್ದಾರೆಂದು ಟೀಕಿಸಿದರು." ಇದು ಇನ್ನೊಂದು ಪ್ರಶ್ನೆ ಏನಾಗುತ್ತದೆ ಎಂದರೆ, ಈ ವಿಷಯ ಸದನದಲ್ಲಿ ದೀರ್ಘವಾಗಿ ಚರ್ಚೆಯಾಗಿದೆ. ಸಂಪರ್ಕ ಇತ್ತ ಇಲ್ಲವೇ ಎಂಬ ಬಗ್ಗೆ ದೀರ್ಘವಾದಂಥ ಚರ್ಚೆಯಾಗಿ ಅದಕ್ಕೆ ಮಾನ್ಯ ಸಭಾನಾಯಕರು ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಟ್ಟು ಅದರ ನಂತರ ಸಭಾಧ್ಯಕ್ಷರು ತಮ್ಮ ತೀರ್ಪನ್ನು ಕೊಟ್ಟಿದ್ದಾರೆ. ಕೊಟ್ಟಮೇಲೂ ಕೂಡ ಇದು ಸಮರ್ಥಿಸಿಕೊಂಡಿದ್ದಾರೆಂದು ಹೇಳತಕ್ಕದ್ದು, ಈ ಸದನದಲ್ಲಿ ತೀರ್ಮಾನವಾಗಿರತಕ್ಕ ವಿಷಯವನ್ನು ಸದನದ ಹೊರಗೆ ಪ್ರಶ್ನೆ ಮಾಡತಕ್ಕಂಥಾದ್ದು ಇಡೀ ಸದನದ ಹಕ್ಕಿನ ಚ್ಯುತಿ ಪ್ರಶ್ನೆ ಬರುತ್ತದೆ. ಇಲ್ಲಿ ಯಾವುದೇ ಒಬ್ಬ ಸದಸ್ಯರ ಪ್ರಶ್ನೆ ಅಲ್ಲ, ಇಡೀ ಸದನದಲ್ಲಿರತಕ್ಕ 224 ಜನ ಸದಸ್ಯರ ಹಕ್ಕಿನ ಚ್ಯುತಿ ಮತ್ತು ಈ ಸದನಕ್ಕೆ ತೋರಿರುವ ಅಗೌರವದ ಪ್ರಶ್ನೆ. ಆದ್ದರಿಂದ ಇದು ಹಕ್ಕುಚ್ಯುತಿ ನಿರ್ಣಯಕ್ಕೆ ನೇರವಾಗಿ ಸಂಬಂಧಪಟ್ಟಿರತಕ್ಕದ್ದು ಎಂದು ನನ್ನ ಅಭಿಪ್ರಾಯ. ಮತ್ತು ಮೂರನೆಯ ಅಂಶ ಅವರು ಹೇಳುತ್ತಾರೆ "ದಳ ಜೊತೆ ಕಾಂಗ್ರೆ, ಕೆಸಿಪಿ ಹೊಂದಾಣಿಕೆ - ಬಿ.ಜೆ.ಪಿ. ಆರೋಪ" ಎಂದು ಹೇಳುತ್ತಾ "ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆ ಮತ್ತು ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ನೇತೃತ್ವದ ಕರ್ನಾಟಕ ಕಾಂಗ್ರೆಸ್ ಪಕ್ಷ ಈಗಿನ ಸರ್ಕಾರದೊಂದಿಗೆ ಹೊಂದಾಣಿಕೆಯ ರಾಜಕೀಯ ಮಾಡುತ್ತಾ ಇರುವುದು ಮೂರು ದಿನ ನಡೆದ ವಿಧಾನಮಂಡಲದ ಅಧಿವೇಶನದ ಕಲಾಪದಿಂದ ರಾಜ್ಯದ ಜನತೆಗೆ ಗೊತ್ತಾದಂತಾಗಿದೆ ಎಂದು ವಿಧಾನಸಭೆಯ ವಿರೋಧಪಕ್ಷದ

ನಾಯಕ ಬಿ.ಎಸ್. ಯಡಿಯೂರಪ್ಪ ಇಂದು ಇಲ್ಲಿ ಆಪಾದಿಸಿದ್ದಾರೆ. ಕಾಂಗ್ರೆ ಪಕ್ಷದವರಿಗೆ ಮತ್ತು ಬಂಗಾರಪ್ಪನವರಿಗೆ ತಾವು ಅಧಿಕಾರದಲ್ಲಿ ನಡೆಸಿರುವ ಅವ್ಯವಹಾರಗಳು ಎಲ್ಲಿ ದಾಖಲೆಗಳ ಸಮೇತ ಬೀದಿಗೆ ಬಂದಾವೋ ಎಂಬ ಭಯವೇ ಭಾರತೀಯ ಜನತಾ ಪಕ್ಷ ಮಂಡಿಸಿದ ಅವಿಶ್ವಾಸ ನಿರ್ಣಯವನ್ನು ಬೆಂಬಲಿಸದೇ ಇರಲು ಕಾರಣವಾಯಿತು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಅಭಿಪ್ರಾಯ ಪಟ್ಟರು. ನಮ್ಮ ತಪ್ಪನ್ನು ಮುಚ್ಚಿಡಿ, ನಿಮ್ಮ ತಪ್ಪನ್ನು ನಾವು ಎತ್ತಿ ತೋರಿಸುವುದಿಲ್ಲ ಎಂದು ಹೊಂದಣಿಕೆ ಅವರಲ್ಲಿ ಆಗಿರುವಂತಿದೆ. ಕಾಂಗ್ರೆ ಮತ್ತು ಕೆ.ಸಿ.ಪಿ.ಗಳೊಡನೆ ಸರ್ಕಾರದೊಂದಿಗೆ ಬದುಕುವ ಮಾರ್ಗವನ್ನು ಕಂಡು ಕೊಂಡಿದೆ ಎಂದು ಅವರು ಟೀಕಿಸಿದರು" ಇದು ಸ್ಪಷ್ಟವಾಗಿ ಮಾನ್ಯ ವಿರೋಧಪಕ್ಷದ ನಾಯಕರು ಇಡೀ ವಿರೋಧಪಕ್ಷಗಳು ಎಲ್ಲವನ್ನೂ ಕೂಡ ನಡೆಸಿಕೊಂಡು ಹೋಗುವುದಕ್ಕೆ ಜವಾಬ್ದಾರಿ ಇದ್ದಂಥ ಮತ್ತು ಎಲಾ ವಿರೋಧಪಕ್ಷಗಳನ್ನು ತಮ್ಮ ನಂಬಿಕೆಗೆ ತೆಗೆದುಕೊಂಡು ಸರ್ಕಾರದ ವೈಫಲ್ಯಗಳನ್ನು ಟೀಕೆ ಮಾಡುವುದಕ್ಕೆ ಬಳಸಿಕೊಳ್ಳುವುದರ ಬದಲು ತಮ್ಮ ಹಾಗೆ ಇರತಕ್ಕ ತಮ್ಮ ಸ್ಥಾನಮಾನಗಳನ್ನೇ ಹೊಂದಿರತಕ್ಕ ಕೆಲವು ರಾಜಕೀಯ ಪಕ್ಷಗಳ ಬಗ್ಗೆ ಅವರು ಅದೂ ಸದನದಲ್ಲಿ ಆ ವಿಷಯ ಪ್ರಸ್ತಾಪ ಮಾಡಿ, ಸದನದಲ್ಲಿ ಆ ವಿಷಯದ ಬಗ್ಗೆ ಚರ್ಚೆಯಾಗಿ ಆ ಸದನ ಒಂದು ತೀರ್ಮಾನಕ್ಕೆ ಬಂದು ಆದಮೇಲೆ ಸದನದ ಹೊರಗಡೆ ಆ ರಾಜಕೀಯ ಪಕ್ಷಗಳ ಬಗ್ಗೆ ಚರ್ಚೆಯಾಗಿ ಆ ಸದನ ಒಂದು ತೀರ್ಮಾನಕ್ಕೆ ಬಂದು ಆದಮೇಲೆ ಸದನದ ಹೊರಗಡೆ ಆ ರಾಜಕೀಯ ಪಕ್ಷಗಳ ಬಗ್ಗೆ ಟೀಕೆ ಮಾಡತಕ್ಕಂಥಾದ್ದು ಮತ್ತು ಆಡಿರತಕ್ಕ ಮಾತು ನಿಜವಾಗಿಯೂ ಕೂಡ ಇದು ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಹಾರಗಳ ಇತಿಹಾಸದಲ್ಲಿ ಬಹುಶಃ ಮೊದಲನೆಯದು ಎಂದು ನನಗನ್ನಿಸುತ್ತದೆ. ಏಕೆಂದರೆ ಈ ಸದನ ರಚನೆಯಾಗಿರತಕ್ಕದ್ದೇ ಇವತ್ತಿನ ಪ್ರಜಾಪ್ರಭುತ್ವದ ನಿಯಮಗಳನ್ನು ಅನುಸರಿಸಿ, ಒಂದು ಸಂಸದೀಯ ಘಟಕ, ಆ ಪ್ರಜಾಪ್ರಭುತ್ವದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಸ್ವತಂತ್ರವಾಗಿ ಅವರದೇ ಆದಂಥ ಕಾರ್ಯಕ್ರಮಗಳ ಆಧಾರದ ಮೇಲೆ ಕೆಲಸ ಕಾರ್ಯ ನಿರ್ವಹಿಸತಕ್ಕ ಜವಾಬ್ದಾರಿ ಸ್ಥಾನದಲ್ಲಿರತಕ್ಕ ರಾಜಕೀಯ ಪಕ್ಷಗಳ ಬಗ್ಗೆ, ಸದನದ ಒಳಗಡೆ ತೀರ್ಮಾನವಾಗಿರತಕ್ಕ ಸಂದರ್ಭದಲ್ಲಿ ಕೂಡ ಸದನದ ಹೊರಗೆ ಪ್ರಶ್ನೆ ಮಾಡಿರತಕ್ಕಂಥಾದ್ದು ಒಂದು ಕಡೆ ಸದನಕ್ಕೆ ಅವರು ಮಾಡಿರತಕ್ಕ ಅಗೌರವ, ಇನ್ನೊಂದು ಕಡೆ ಇಡೀ ಸಂಸದೀಯ ನಿಯಮಾವಳಿಗಳನ್ನು ಉಲ್ಲಂಘಿಸಿ ಪ್ರಜಾಪ್ರಭುತ್ವದ ಕನಿಷ್ಠ ನಿಯಮವನ್ನು ಕೂಡ....

ಅಧ್ಯಕ್ಷರು : ಒಂದು ನಿಮಿಷ. ಅವರು ಕೋಲಾರ ಜಿಲ್ಲೆಯವರು. ನಾನೂ ಕೋಲಾರ ಜಿಲ್ಲೆಯವನೆ. ನಮಗೆ ಮಾತೃಭಾಷೆ ತೆಲುಗು. ಕೆಲವು ಪದಗಳನ್ನು ನಾವು ಬಳಸುವಾಗ ನಿಮಗೆ ಅದು ವಿಚಿತ್ರವಾಗಿ ಕಾಣಿಸುತ್ತದೆ. ಅವರು ಸಂಸದೀಯ ಎನ್ನುವ ಬದಲು ಬೇರೆ ರೀತಿಯಲ್ಲಿ ಹೇಳಿದರು. (ಮಾನ್ಯ ಸದಸ್ಯರಾದ ಶ್ರೀರಾಮ ರೆಡ್ಡಿಯವರು 'ಸಂಸದೀಯ' ಎನ್ನುವ ಬದಲು 'ಸಂಸಂದೀಯ' ಎಂದು ಸಂಬೋಧಿಸುತ್ತಿದ್ದರು.) ಅದು ಭಾಷೆ ವ್ಯತ್ಯಾಸ. ಗುಲ್ಬರ್ಗ ಕಡೆಯವರು ಮಾತನಾಡುವಾಗ ಜರ ಫರಕ್ ಆಗುತ್ತದ್ರೀ ಎಂದು ಹೇಳುತ್ತಾರೆ. ನೀವು ಇನ್ನೊಂದು ರೀತಿಯಲ್ಲಿ ಮಾತನಾಡುತ್ತೀರಿ. ದಯಮಾಡಿ ಸಹಕರಿಸಿ. ಅವರು ಹೇಳುತ್ತಾ ಇರುವುದು ಸರಿ ಇದೆ. ನನಗೆ ನಿಮ್ಮ ಭಾಷೆ ಅವರ ಭಾಷೆ ಎರಡೂ ಗೊತ್ತಿರುವುದರಿಂದ ತರ್ಜುಮೆ ಮಾಡಿ ಹೇಳಿದೆ.

ಶ್ರೀ ಎ.ಬಿ. ಪಾಟೀಲ್: ಅಧ್ಯಕ್ಷರೆ, ಅವರಿಗೆ ಕನ್ನಡ ಬರದಿದ್ದರೂ ಕೂಡ ಕನ್ನಡದಲ್ಲೇ ಮಾತನಾಡುವಂಥ....

ಅಧ್ಯಕ್ಷರು : ಕನ್ನಡ ಬರುತ್ತದೆ. ಕೆಲವು ಪದಗಳ ಉಚ್ಚಾರಣೆ ಅಷ್ಟೆ.

ಶ್ರೀ ಎ.ಬಿ. ಪಾಟೀಲ್ : ಸರಿಯಾಗಿ ಬರದಿದ್ದರೂ ಕೂಡ ಮಾತನಾಡುತ್ತಿದ್ದಾರೆ. ಈ ಸದನದಲ್ಲೇ ನಾನು ನೋಡಿದ್ದೇನೆ. ಕನ್ನಡ ಬಂದೂ ಬೇರೆ ಭಾಷೆಯಲ್ಲಿ

ಮಾತನಾಡುತ್ತಾರೆ. ನಿಜವಾಗಿ ಅವರನ್ನು ಪ್ರಶಂಸೆ ಮಾಡುವುದನ್ನು ಬಿಟ್ಟು ಬೈಯುತ್ತಿದ್ದಾರೆ. ಏನೋ ಹೇಳುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೆ, ಈ ಸಂಸದೀಯ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿರತಕ್ಕಂಥಾದ್ದು ಒಂದು ಕಡೆಯಾದರೆ ಅದನ್ನು ರೂಪಿಸಿರತಕ್ಕ ಪ್ರಜಾಪ್ರಭುತ್ವವನ್ನು ಅಣಕ ಮಾಡಿದ್ದಾರೆ ಎಂಬುದು ಇನ್ನೊಂದು ಮುಖ್ಯವಾದಂಥದ್ದು. ಈ ಮುಖ್ಯವಾದ ಮೂರು ವಿಷಯಗಳು ಸ್ಪಷ್ಟವಾಗಿ ನನ್ನ ತಿಳಿವಳಿಕೆಗೆ ಬಂದಂಥ ರೀತಿಯಲ್ಲಿ ಆ ಸದನಕ್ಕೆ ಅಗೌರವ ತೋರಿದ್ದಾರೆ, ಈ ಸದನದ ಸಭಾಧ್ಯಕ್ಷರ ಸ್ಥಾನಕ್ಕೆ ಅಗೌರವವನ್ನು ತೋರಿಸಿರುವುದಷ್ಟೇ ಅಲ್ಲದೆ ಸಭಾಧ್ಯಕ್ಷರ ಸ್ಥಾನಕ್ಕೆ ಸೂಚಿಸಿರತಕ್ಕ ಅಗೌರವ ಎಂದು ನನ್ನ ತಿಳುವಳಿಕೆ ಮಟ್ಟಿಗೆ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳುತ್ತಿದ್ದೇನೆ.

7.20 ಪಿ.ಎಂ.

ಆದ್ದರಿಂದ ನಾನು ಏನು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದ್ದೇವೆ ಅದನ್ನು ಈ ಅಂಶಗಳ ಆಧಾರದ ಮೇಲೆ ತಾವು ಈ ನಿರ್ಣಯವನ್ನು ಒಪ್ಪಬೇಕು, ನಿರ್ಣಯವನ್ನು ಒಪ್ಪಬೇಕು, ನಿರ್ಣಯವನ್ನು ಅಂಗೀಕರಿಸಿ ಚರ್ಚೆಗೆ ಅನುಮತಿ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ : ಅವರು ಚರ್ಚೆಗೆ ಅಲೋ ಮಾಡಿ ಬಿಟ್ಟಿದ್ದಾರೆ ಆದ್ದರಿಂದ ನಾಳೆ ಚರ್ಚೆ ಮಾಡೋಣ.

ಶ್ರೀ ಹೆಚ್.ಎನ್. ನಂಜೇಗೌಡ : ಅಲೋ ಮಾಡಿದ್ದಾರೆಂದು ಅವರು ಹೇಳುತ್ತಾರೆ. I want to set the record straight. ಈ ಸ್ಟೇಜಿನಲ್ಲೇ ನನ್ನ ಅಬ್ಜೆಕ್ಷನ್ ಏನು ಎಂದು ಹೇಳಿ ಬಿಡುತ್ತೇನೆ. ಒಂದು ವಿಚಿತ್ರವಾದ ಪರಿಸ್ಥಿತಿ ಇಂದು ಒದಗಿದೆ. ಅದು ಅಷ್ಟೇ ಅಲ್ಲ, ಎ ಡೇಂಜರಸ್ ಟ್ರೆಂಡ್ ಏನು ಡೇಂಜರಸ್ trend ಪಾರ್ಲಿಮೆಂಟರಿ ಡಿಸ್‌ಕಷನ್‌ನಲ್ಲಿ ನಮ್ಮ ಸಿಸ್ಟಂನಲ್ಲಿ it is always the Government which is put on the dock; ಅಲ್ಲವೇ. ಇಲ್ಲಿ ಕರ್ನಾಟಕದಲ್ಲಿ ರಿವರ್ಸ್ ಆಗಿದೆ. ವಿರೋಧ ಪಕ್ಷದ ನಾಯಕರನ್ನು ಕಟಕಟೆಯಲ್ಲಿ ನಿಲ್ಲಿಸುವುದಕ್ಕೆ ಎಲ್ಲಾ ಸೇರಿಕೊಂಡು ನೋಡುತ್ತಿದ್ದಾರೆ.

(ಗೊಂದಲ)

Sri K.N. Nagegowda : Who is responsible for all these things? Your leader is responsible for all these things.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಏನು ಹೇಳಿದೆ ಎಂದರೆ, What is the parliamentary practice? How the Government is put on the dock and heckled and questioned for its omissions and commissions; ಈಗ ಅದು ಏಕೋ ಮರೆಯಾಗುತ್ತಿದೆ, ಇರಲಿ. ಅವರವರ ತಿಳುವಳಿಕೆಯಲ್ಲಿ ಅದು ಸರಿ ಅಂದರೆ ಏನೂ ಮಾಡುವುದಕ್ಕಾಗುವುದಿಲ್ಲ, ನಾನು ಏಕೆ ಹೇಳುತ್ತೇನೆ ಅಂದರೆ, ನಮ್ಮ ಯಡಿಯೂರಪ್ಪನವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ ನೀವೆಲ್ಲಾ ಸೇರಿಕೊಂಡು ಈ ತರಹ ಮಾಡಿದ್ದರೆ ನಾನು ಸಂತೋಷ ಪಡುತ್ತಿದ್ದೆ. ಇನ್ನೂ ಅವರು ಮುಖ್ಯಮಂತ್ರಿಯೇ ಆಗಿಲ್ಲ. ವಿರೋಧ ಪಕ್ಷದ ನಾಯಕರಾಗಿದ್ದಾಗಲೇ ಈ ರೀತಿ ತ್ರಾಸ ಎತ್ತುವುದಕ್ಕೆ ನೋಡುತ್ತಿರಲಿಲ್ಲ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದ್ದರಿಂದ ನಾನು ಅರ್ಥ ಮಾಡಿಕೊಂಡಿದ್ದು, ಪತ್ರಿಕಾ ವರದಿಗಳನ್ನು ಆಧರಿಸಿ ಇವತ್ತು ಒಂದು ಪ್ರಿವಿಲೇಜ್ ನೋಟೀಸ್ ಕೊಟ್ಟಿರತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿದೆ. ನನಗೆ ಕಂಡ ಹಾಗೆ ಮೊದಲನೆ ನಿರ್ಣಯ ಬಂದದ್ದು ಲೋಕಸಭೆಯಲ್ಲಿ 20-4-60 ಕೌಲ್ ಅಂಡ್ ಶಕ್‌ದರ್....

ಶ್ರೀ ಎಸ್. ಬಂಗಾರಪ್ಪ : ಪ್ರಿಲಿಮಿನರಿ ಹಂತದಲ್ಲಿ ನಾವು ಇದ್ದೇವೆ. ನಿರ್ಣಯವನ್ನು ಮಂಡನೆ ಮಾಡುವುದಕ್ಕಿಂತ ಮೊದಲು ಸಭಾಧ್ಯಕ್ಷರ ಅನುಮತಿ ಬೇಕು ಆಮೇಲೆ ಪ್ರೊಸೀಜರ್ ಪ್ರಕಾರ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ಚರ್ಚೆ ಪ್ರಾರಂಭವಾಗಿದೆ ಎಂದು ಹೇಳುತ್ತೀರಿ.... ಚರ್ಚೆ ಅಡ್ಡ ದಾರಿ ಹಿಡಿದರೆ ಏನು ಮಾಡುವುದು.

ಶ್ರೀ ಎಸ್. ಬಂಗಾರಪ್ಪ : ಮೊದಲು ನಿರ್ಣಯಗಳ ಪ್ರಸ್ತಾಪವಾಗಲಿ ಎಂದು ಮಾನ್ಯ ನಂಜೇಗೌಡರಲ್ಲಿ ವಿನಂತಿ ಮಾಡುತ್ತಿದ್ದೇನೆ. ಅಡ್ಡ ದಾರಿ ಹಿಡಿಯುವುದಿಲ್ಲ, ಅನುಮತಿ ಕೊಟ್ಟಿದ್ದೇವೆಂದ ಮೇಲೆ ಮಾನ್ಯ ಸದಸ್ಯರು ಬೆಂಬಲ ಕೊಡುವುದು ಎಲ್ಲಾ ಪ್ರೊಸೀಜರ್ ಇದೆ. ಪಾರ್ಲಿಮೆಂಟ್ ವಿಚಾರ ಹೇಳುವುದಕ್ಕೆ ಹೋದರೆ, ಇಲ್ಲಿರತಕ್ಕಂತಹ ನಿಯಮಾಳಿಗಳ ಪ್ರಕಾರ ನಡೆದುಕೊಳ್ಳುತ್ತಿರುವ ಹಾಗೂ ನಿರ್ಣಯ ತಂದಿರತಕ್ಕಂತಹ ಮಾನ್ಯ ಸದಸ್ಯರ ಗತಿ ಏನಾಗುತ್ತದೆ.

Sri H.N. Nanjegowda : If the preliminary submissions themselves are wrong should we allow them to continue? That is my opinion.

ಶ್ರೀ ಎಸ್. ಬಂಗಾರಪ್ಪ : ಪ್ರಿಲಿಮಿನರಿ ಸಬ್ಮಿಷನ್ ಮಾಡದೇ ಮಾನ್ಯ ಸಭಾಧ್ಯಕ್ಷರು ಒಪ್ಪಿಗೆ ಹೇಗೆ ಕೊಡುವುದು.

ಅಧ್ಯಕ್ಷರು : ನಿಯಮ 191ರ ಕೆಳಗೆ ನೋಟೀಸ್ ಕೊಟ್ಟಿದ್ದೀರಿ 192 193 ಅನ್ನೂ ಸ್ಯಾಟಿಸ್ಫೈ ಮಾಡಿಕೊಂಡು 194ರ ಕೆಳಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದ್ದಾರೆ. ಈ ಹಂತದಲ್ಲೇ ಅವರು ಪ್ರಸ್ತಾಪ ಮಾಡಿರತಕ್ಕಂಥಾದ್ದು ಸರಿಯಲ್ಲ ಅಥವಾ ಕ್ರಮಬದ್ಧವಲ್ಲವೆಂದು ಹೇಳುವುದಕ್ಕೆ ಶ್ರೀಮಾನ್ ನಂಜೇಗೌಡರು ನಿಂತಿದ್ದಾರೆ. ಅವರ ವಾದವನ್ನು ಅವರು ಮಂಡನೆ ಮಾಡಲಿ. ನಂತರ ತಾವು ಹೇಳುವುದನ್ನೂ ಕೇಳುತ್ತೇನೆ. ಅವರೂ ಹೇಳಲಿ. ನಿರ್ಣಯವನ್ನು ನಾನು ಕೊಡುತ್ತೇನೆ.

ಶ್ರೀ ಟಿ.ಟಿ. ಜಯಚಂದ್ರ : ತಾವೇ ಹೇಳಿಕೆ ಕೊಟ್ಟಿರಿ. 4 ಇದೇ ತರಹ ನೋಟೀಸ್ ಬಂದಿದೆ ಎಂದು ಹೇಳಿದಿರಿ. 4 ಅನ್ನೂ ಮಂಡನೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಮಂಡನೆಯಾದ ಮೇಲೆ ಮಾನ್ಯ ನಂಜೇಗೌಡರ ವಾದವನ್ನು ಪುರಸ್ಕಾರ ಮಾಡುವುದಕ್ಕೆ ಅವಕಾಶ ಇದೆ.

ಅಧ್ಯಕ್ಷರು : ದಯಮಾಡಿ ಕೇಳಿ. 4 ಜನರು ಒಂದೇ ವಿಷಯದ ಮೇಲೆ ನೋಟೀಸ್ ಕೊಟ್ಟಿದ್ದೀರಿ. ಆ ನೋಟೀಸ್ನ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು ಪ್ರಸ್ತಾಪ ಮಾಡಿದ್ದಾದ ಮೇಲೆ ಅದು ಕ್ರಮಬದ್ಧವಾಗಿಲ್ಲವೆಂತಲೋ ಮತ್ತೇನೋ ಹೇಳುವುದಕ್ಕೆ ಅವರು ನಿಂತಿದ್ದಾರೆ. ಅವರು ಹೇಳಿದ ಮಾತ್ರಕ್ಕೆ ಬೇರೆಯವರಿಗೆ ಅವಕಾಶ ಸಿಕ್ಕುವುದಿಲ್ಲವೆಂದೇನೂ ಇಲ್ಲ, ಒಂದು ವೇಳೆ ಅವರು ಹೇಳಿದ್ದುದು ಸರಿಯಾಗಿದ್ದು ಕ್ರಮಬದ್ಧವಾಗಿಲ್ಲದೇ ಹೋದರೆ ಈ ವಿಷಯದಲ್ಲಿ ಬಂಡವಾಳವಿಲ್ಲವೆಂದಾದರೆ ಶ್ರೀ ಶ್ರೀರಾಮರೆಡ್ಡಿಯವರು ಹೇಳಿದ ಮಾತಿಗೆ ಸೀಮಿತವಾಗುತ್ತದೆ. ನೀವೇನು ಹೇಳುತ್ತೀರೋ ಅದು ಅವರಿಗೆ ಗೊತ್ತಿಲ್ಲವಲ್ಲ, ನಿಮ್ಮನ್ನು ನಾನು

ಕಡೆಯುವುದಿಲ್ಲವೆಂದು ಹೇಳಿಲ್ಲ, ಯಾರ್‍ಯಾರು ಸಹಿ ಮಾಡಿದ್ದೀರಿ ಸ್ವಲ್ಪ ತಾಳ್ಮೆಯಿಟ್ಟುಕೊಳ್ಳಿ. ಬೆಳಿಗ್ಗಿನಿಂದ ತಾಳ್ಮೆಯಿಂದ ಇದ್ದಿರಿ ಈಗ ಸಂಜೆ ತಾಳ್ಮೆಯಿಂದ ಇರಬೇಕು.

ಶ್ರೀ ಕೆ.ಎನ್. ನಾಗೇಗೌಡ : ನಾನು ತಮ್ಮ ಮುಖಾಂತರ ಮಾನ್ಯ ನಂಜೇಗೌಡರಲ್ಲಿ ವಿನಂತಿ ಮಾಡುತ್ತೇನೆ. ಎಲ್ಲರ ಪ್ರಿಲಿಮಿನರಿ ಸಬ್ಮಿಷನ್ ಅನ್ನು ಅವರು ಕೇಳಲಿ. ಅವರು ಒಳ್ಳೆಯ ಪಾರ್ಲಿಮೆಂಟೇರಿಯನ್. ಇಲ್ಲಿ ಪ್ರೊಸೀಜರ್ ಹೇಗೆ ಅಂದರೆ ಯಾವುದೇ ಒಂದು ಕಾಮನ್ ನೋಟೀಸಿಗೆ 3-4 ಸದಸ್ಯರು ಆಕ್ಷೇಪಣೆ ಮಾಡಿ ಎತ್ತಿದಂತಹ ಸಂದರ್ಭದಲ್ಲಿ ವಿಚಾರಗಳನ್ನು ಎಲ್ಲರದ್ದೂ ತೆಗೆದುಕೊಂಡು ಆಮೇಲೆ ಅವರೇ ಮಾತನಾಡಬಹುದು. ಅವರಿಗೇನು ಅವಕಾಶವಿಲ್ಲವೆಂದು ಅಲ್ಲ, ಅವರಿಗೆ ಅವಕಾಶವಿದೆ.

ಅಧ್ಯಕ್ಷರು : ಈಗ There is some force in what Mr. Nagegowda says

ಶ್ರೀ ರಾಮರೆಡ್ಡಿಯವರು ಹೇಳಿದ್ದನ್ನು ಹಿಯರ್ ಮಾಡಿ if you are likely to say something, ಮತ್ತು ಉಳಿದ ಸದಸ್ಯರಿಗೂ ನಾನು ಅವಕಾಶ ಕೊಡಬೇಕಾಗುತ್ತದೆ. ಪ್ರತಿಯೊಬ್ಬರೂ ಹೇಳಿದ ಮೇಲೂ ತಾವು ಹೇಳುವುದೂ ಅಥವಾ ಸ್ವಲ್ಪ ತಾಳ್ಮೆಯಿಟ್ಟುಕೊಂಡು ಅವರು ಯಾರ್‍ಯಾರು ಸಬ್ಮಿಷನ್ ಮಾಡುವವರಿದ್ದಾರೆ ಅವರೆಲ್ಲಾ ಮಾಡಿದ್ದಾದ ಮೇಲೆ ಒಟ್ಟಿಗೆ ತಮ್ಮ ಅಬ್ಜೆಕ್ಷನ್ ಏನು ಇದೆ ಅದನ್ನು ಹೇಳುತ್ತೀರಾ ಹೇಗೆ ಮಾಡುತ್ತೀರಿ.

ಶ್ರೀ ಕೆ. ಶರಣಪ್ಪ : ಪ್ರಿಲಿಮಿನರಿ ಹಿಯರಿಂಗ್ ಪ್ರಾರಂಭವಾದ ನಂತರ ಒಂದು ವಾದ ಸಂಪೂರ್ಣವಾದ ನಂತರ ವಿರೋಧ ಪಕ್ಷದವರನ್ನು ಕೇಳಬೇಕೇ ಹೊರತು ಇನ್ನೊಬ್ಬರು ಏನು ಮಂಡನೆ ಮಾಡುತ್ತಾರೆಂದು ತಿಳಿದುಕೊಂಡು ಉತ್ತರ ಕೊಡುವುದಕ್ಕೆ ಅನುಕೂಲವಾಗುವುದಿಲ್ಲ.

ಅಧ್ಯಕ್ಷರು : ನೀವು ಸುಮ್ಮನೆ ಇದ್ದುಬಿಡಿ ಅವರೆಲ್ಲಾ ವಿರೋಧ ಪಕ್ಷದವರೇ.

ಶ್ರೀ ಹೆಚ್.ಎನ್. ನಂಜೇಗೌಡ : ನನಗೆ ಸ್ವಲ್ಪ ಫಜೀತಿಯಾಗಿದೆ. ನಾನು ಅದಕ್ಕೇ ಪದೇ ಪದೇ ಹೇಳಿದೆ ನಿಮ್ಮ ಆಧಾರವೇನು ಎಂದು. ಪತ್ರಿಕಾ ಹೇಳಿಕೆ ಎಂದು ಹೇಳಿದರು. ನಾನು ಅದರ ಬಗ್ಗೆ ಇನ್ನೂ ಹೋಗಿಲ್ಲ, ಅವರು 4 ಜನ ನೋಟೀಸ್ ಕೊಟ್ಟಿದ್ದಾರೆಂದು ನೀವು ಹೇಳಿದಿರಿ. ಅವರೇನು ಆಧಾರವಿಟ್ಟುಕೊಂಡು ಕೊಟ್ಟಿದ್ದಾರೆನ್ನುವುದಕ್ಕೆ ತಮ್ಮಿಂದಲೂ, ಅಧ್ಯಕ್ಷ ಪೀಠದಿಂದಲೂ ನಮಗೆ ಉತ್ತರ ಬಂದಿಲ್ಲ, ಮಾನ್ಯ ನಾಗೇಗೌಡರು ಚರ್ಚೆ ಪ್ರಾರಂಭವಾಗಿದೆ ಎನ್ನುವ ಲೆಕ್ಕದಲ್ಲಿ ಹೇಳಿದರು. ನನಗೆ ಈ ಪ್ರೊಸೀಜರ್ ಗೊತ್ತಿಲ್ಲ, ನಾನು 15 ವರ್ಷದಿಂದ ಹೊರಗಿದ್ದೆನಲ್ಲ, ಇಲ್ಲಿ ಇರಲಿಲ್ಲ, ತಾವು ಹೇಳಿದ ಹಾಗೆ 4 ಜನ ಸಬ್ಮಿಷನ್ ಮಾಡಿದ ಮೇಲೇ ನಾನು ಹೇಳುತ್ತೇನೆ. ನಿಜವಾಗಿಯೂ ನನಗೇನೂ ಆತುರ ಇಲ್ಲ.

ಅಧ್ಯಕ್ಷರು : ತಾವು ನಮ್ಮ ರೂಲ್ಸ್ ಅನ್ನು ಒಮ್ಮೆ ಗ್ಲಾನ್ಸ್ ಮಾಡಿಬಿಡಿ. ನನಗೆ ಸ್ಟಾಟಿಸ್ಟಿಯಿಂಡ್ ಇನ್ಸಿಡೆಂರುನ್ಸ್ ಏನು ಇದೆ ಅದನ್ನು ನೋಡಿದ ಮೇಲೆ I allow them to make preliminary submissions. ಒಂದು ಸಲ ಅದೆಲ್ಲ ಆದ ಮೇಲೆ this is not the end of the matter before I give consent.

ಶ್ರೀ ಹೆಚ್.ಎನ್. ನಂಜೇಗೌಡ : ತಾವು ಕನ್ಸೆಂಟ್ ಕೊಡುವುದಕ್ಕೆ ಮೊದಲು ಆಗಲಿ, ರಿಜೆಕ್ಟ್ ಮಾಡುವುದಾಗಲಿ, ನನ್ನ ಅಬ್ಜೆಕ್ಷನ್ ಕೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ : ಒಂದು ಪ್ರೊಸೀಜರ್ lapse ಇದೆ. You have straightaway allowed them to speak under rule 195. Still I am in rule No. 191. Kindly allow me to speak.

Mr. Speaker : You are in the preliminary stage because this is a uniform notice given by different members. I have a duty to hear all the members or atleast sizable signatories before moving to Rule No. 195. I am still in 194; I am clear about it.

Let there be no attempt from any quarter to mislead me to jump over to the next section immediately.

Sri K.N. Nagegowda : Ok Sir, Allow me for two minutes. I will move my Motion for only 2Ë3 minutes. I will not take morethan 2-3 minutes.

Mr. Speaker : You are making a preliminary submission.

+ಶ್ರೀ ಕೆ.ಎನ್. ನಾಗೇಗೌಡ : Yes, ಮಾನ್ಯ ಸಭಾಧ್ಯಕ್ಷರೆ, 191ನೆ ನಿಯಾಮಾವಳಿ ಪ್ರಕಾರ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವವ ಹೇಳಿಕೆಗಳ ಬಗ್ಗೆ ಪತ್ರಿಕೆಗಳಲ್ಲಿ ಬಂದಿರತಕ್ಕಂತಹದ್ದು, 9 ಮತ್ತು 10ನೇ ತಾರೀಖು ನಡೆದಂತಹ ಪತ್ರಿಕಾ ಗೋಷ್ಠಿಯಲ್ಲಿ 11ನೇ ತಾರೀಖು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳ ಆಧಾರದ ಮೇಲೆ ಅದರ ಮೇಲೆ ಹಕ್ಕುಚ್ಯುತಿಯನ್ನು ತಾವು ಕೈಗೆ ಎತ್ತಿಕೊಂಡು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ಪೂರ್ವಭಾವಿ ಚರ್ಚೆಗೆ ತಾವು ಅನುಮತಿ ಕೊಟ್ಟಿದ್ದಕ್ಕೆ ತಮಗೆ ನಾನು ಅಭಿನಂದಿಸುತ್ತೇನೆ. ಈಗಾಗಲೇ ನನ್ನ ಸ್ನೇಹಿತರಾದ ಶ್ರೀ ಶ್ರೀರಾಮ ರೆಡ್ಡಿಯವರೂ ಸಹ ಪೂರ್ವ ಭಾವಿ ಅನಿಸಿಕೆಗಳಿಗೆ ತಾವೆಲ್ಲರೂ ಸಹ ಸಮ್ಮತಿಸಿದ್ದೀರಿ ಎಂದು ನಾನು ಭಾವಿಸಿಕೊಳ್ಳುತ್ತೇನೆ. ನಾನು 20-25 ವರ್ಷಗಳ ಕಾಲ ಕರ್ನಾಟಕ ರಾಜ್ಯದ ವಿಧಾನ ಮಂಡಲದ ವಿಚಾರಗಳನ್ನು ಒಳಗೆ ಮತ್ತು ಹೊರಗೆ ಎಲ್ಲಾ ನೋಡಿರತಕ್ಕಂತಹವರು, ಕೇಳಿರತಕ್ಕಂತಹವರು, ಅನುಭವಿಸಿರತಕ್ಕಂತಹವರು. ಮಾನ್ಯ ನಂಜೇಗೌಡರು ಅತ್ಯಂತ ಹಿರಿಯ ಸಂಸದೀಯ ಪಟು. ಅವರೂ ಸಹ ಒಗ್ಗಟ್ಟಾಗಿ ಕೂಡಿಕೊಂಡು ವಿರೋಧಪಕ್ಷದ ನಾಯಕರ ಮೇಲೆ ಅವರ ಮುಂದಿನ ಮುಖ್ಯಮಂತ್ರಿಗಳಾಗುತ್ತಾರೆ ಎನ್ನುವ ಭಾವನೆ ಮೇಲೆ ನೀವೆಲ್ಲಾ ಇವತ್ತು ಧಾಳಿ ನಡೆಸುತ್ತಿದ್ದೀರಿ ಎನ್ನತಕ್ಕ ಮಾತನ್ನು ಅವರು ಬಳಸಿದರು.

ಅಂತಹ ರೀತಿಯಾದಂತಹ ಧಾಳಿಯಲ್ಲ, ಸಂಸದೀಯ ವಿಚಾರದಲ್ಲಾಗಲೀ, ತಾವೂ ಪಾರ್ಲಿಮೆಂಟ್ನಲ್ಲಿ ಕೆಲಸ ಮಾಡಿದ್ದೀರಿ. ನಿಮ್ಮ ಕೆಳಗಡೆ ನಾವೆಲ್ಲಾ ಕೆಲಸ ಮಾಡಿದ್ದೇವೆ. ತಾವು 1962-67ರಿಂದ ಇದ್ದೀರಿ. ಮಾನ್ಯ ದೇವೇಗೌಡರು ಬಹಳ ವರ್ಷಗಳಿಂದ ಅಂದರೆ 1967ರಿಂದಲೂ ಇದ್ದಾರೆ. ಮಾನ್ಯ ಬಂಗಾರಪ್ಪನವರು ಇದ್ದಾರೆ. ಮಾನ್ಯ ಮೊಯಿಲಿಯವರು ಇದ್ದಾರೆ, ಎಲ್ಲರೂ ಇದ್ದಾರೆ. ವಿರೋಧ ಪಕ್ಷದ ನಾಯಕರ ಮೇಲೆ, ಹೊರಗಡೆ ವಿರೋಧ ಪಕ್ಷದ ನಾಯಕರು ಒಂದು ಸಭೆಯ ನಿಯಾಮಾವಳಿಗಳನ್ನು ಗಾಳಿಗೆ ತೂರಿ, ಸಭೆಯ ನಿಯಮಾವಳಿಗಳನ್ನು ಅತ್ಯಂತ ಜವಾಬ್ದಾರಿ ಸ್ಥಾನದಲ್ಲಿರತಕ್ಕಂತಹವರು, ನನಗೆ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಿಂತ, ಮಂತ್ರಿ ಸ್ಥಾನಕ್ಕಿಂತ ಅತ್ಯಂತ ಹೆಚ್ಚಿನ ಜವಾಬ್ದಾರಿ ಇರತಕ್ಕಂತಹದ್ದು ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಎಂದು ನಾನು ಅಂದುಕೊಂಡಿದ್ದೇನೆ. ಅತ್ಯಂತ ಜವಾಬ್ದಾರಿ ಸ್ಥಾನ, ಸಂಸದೀಯ ವ್ಯವಹಾರದಲ್ಲಿ, ಯಾರಾದರೂ ನಾಯಕರು ಅಂದರೆ, ವಿರೋಧ ಪಕ್ಷದ ನಾಯಕರು. ಆಡಳಿತದ ವಿಚಾರದಲ್ಲಿ ಮುಖ್ಯಮಂತ್ರಿಗಳು ನಾಯಕರಾಗಿರುತ್ತಾರೆ. ಅಂತಹ ಸಂಸದೀಯ ವಿಚಾರದಲ್ಲಿ ನಮ್ಮದೇ ಆದ ನಿಯಮಾವಳಿಗಳನ್ನು ರಚಿಸಿಕೊಂಡು ನಡೆಸತಕ್ಕಂತಹ ಈ ಸಾರ್ವಭೌಮತ್ವವನ್ನು ಹೊಂದಿರತಕ್ಕಂತಹ ಇಂತಹ ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿ, ಇಲ್ಲಿ ನಡೆದಂತಹ ನಡವಳಿಕೆಗಳನ್ನು, ಇಲ್ಲಿ ಕೊಟ್ಟಂತಹ ತೀರ್ಪುಗಳನ್ನು ಹೊರಗಡೆ ಚರ್ಚೆ ಮಾಡಿ, ಟೀಕೆ ಮಾಡತಕ್ಕಂತಹ, ಅಥವಾ ಅದು ಸರಿಯಿಲ್ಲವೆಂದು

ಪ್ರಶ್ನೆ ಮಾಡತಕ್ಕಂತಹ ಘಟನೆ ಭಾರತ ದೇಶದಲ್ಲಿ ನಡೆದಿದ್ದರೆ, ಅವರು ಉದಾಹರಣೆ ಕೊಡಬೇಕು ಎಂದು ನಾನು ಕೇಳುತ್ತೇನೆ. ಇದು ಸುಮಾರು 114 ವರ್ಷವಾಯಿತು. ನಾನು ರೆಕಾರ್ಡಸ್ಸು ನೋಡಿದೆ. ಅದಕ್ಕೆ ಚರ್ಚೆಗೆ ನಾಳೆ ಬರುತ್ತೇನೆ. ನಮ್ಮ ಕೌನ್ಸಿಲ್ 84-85-86 ವರ್ಷಗಳಾಯಿತು.

ನಮ್ಮ ಜೆ.ಹೆಚ್. ಪಟೇಲ್ರವರೂ ಇದ್ದಾರೆ, ಒಂದು ಘಟನೆ, ವಿರೋಧ ಪಕ್ಷದ ನಾಯಕರು, ಕರ್ನಾಟಕ ರಾಜ್ಯದ ಸಂಸದೀಯ ಇತಿಹಾಸದಲ್ಲಿ ಸ್ಪೀಕರ್ರವರ ರೂಲಿಂಗ್ನ್ನು ಹೊರಗಡೆ ಪ್ರಶ್ನೆ ಮಾಡತಕ್ಕಂತಹ ಒಂದು ಘಟನೆಯ ನಿದರ್ಶನವನ್ನು ಕೊಟ್ಟರೆ ನಾನು ಈ ನನ್ನ ನಿಲುವಳಿ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಒಂದು ಘಟನೆಯನ್ನು ನೀಡಿದರೆ ಸಾಕು. ಇಂತಹ ಒಂದು ಅಪಚಾರ, ಈ ಸಂಸದೀಯ ವ್ಯವಹಾರಕ್ಕೆ ಅಪಚಾರ. 5 ಕೋಟಿ ಜನ ನಮಗೆ ಮತಕೊಟ್ಟು ಇಲ್ಲಿಗೆ ಕಳುಹಿಸಿದ್ದಾರೆ ನಾವೇ ಕಾನೂನು ಮಾಡಿಕೊಂಡು, ಜನರಿಗೋಸ್ಕರ ಇರತಕ್ಕಂತಹ ಸರ್ಕಾರವನ್ನು ರಚಿಸಿಕೊಂಡು ಕೆಲಸ ಮಾಡತಕ್ಕಂತಹ ಇಂತಹ ವ್ಯವಸ್ಥೆಯೊಳಗೆ, ಇಂತಹ ಅವಮಾನ ಮಾಡಿದಂತಹ ಚರಿತ್ರೆ ಯಾವುದಾದರೂ ಇದ್ದರೆ ನಾನು ಏನು ಬೇಕಾದರೂ ಕ್ಷಮಾಪಣೆ ಕೇಳುವುದಕ್ಕೆ ತಯಾರಾಗಿದ್ದೇನೆ. ಯಾರಿಗೆ ಈ ಸಂಸದೀಯ ವ್ಯವಹಾರದಲ್ಲಿ ನಂಬಿಕೆ ಇರುತ್ತದೆ, ಪ್ರಜಾ ಪ್ರಭುತ್ವದಲ್ಲಿ ನಂಬಿಕೆ ಇರುತ್ತದೆ, ಯಾರಿಗೆ ಆಡಳಿತದಲ್ಲಿ ನಂಬಿಕೆ ಇರುತ್ತದೆ, ಯಾರಿಗೆ ಜನರಲ್ಲಿ ನಂಬಿಕೆ ಇರುತ್ತದೆ, ಜವಾಬ್ದಾರಿ ಸ್ಥಾನದಲ್ಲಿರತಕ್ಕಂತಹವರು ಯಾರೂ ಸಹ ಇಂತಹ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ಮಾಡಲಿಲ್ಲ ಎನ್ನುವ ನೋವಿಗೋಸ್ಕರವೇ ವಿರೋಧ ಪಕ್ಷದ ನಾಯಕರನ್ನು ವೈಯಕ್ತಿಕವಾಗಿ ಬೆಟ್ಟು ಮಡಿಸಿ ಅವರ ಮೇಲೆ ಗೂಬೆ ಕೂರಿಸಬೇಕು ಎನ್ನತಕ್ಕಂತಹ ವಿಚಾರ ಅಲ್ಲ, ಎಂತೆಂತಹ ಘಟನೆಗಳನ್ನೋ ನಾವು ನೋಡಿದ್ದೇವೆ. ಇನ್ನೂ ಉದಾಹರಣೆಗಳನ್ನು ನಾನು ಕೊಡುವವನು ಇದ್ದೇನೆ. ಇವತ್ತು ಈ ಮನೆಯ ಸಭಾಧ್ಯಕ್ಷರು ಸುಪ್ರೀಮ್ ಪವರ್. ಶಕ್ಧರ್-ಕೌಲ್ ನಿಮ್ಮ ಮುಂದೇನೆ ಇದೆ. ತೆಗೆಯಿರಿ ಓದಿರಿ. ಪರಮ ಉಚ್ಚಸ್ಥಾನ ಅವರದ್ದು. ಇವತ್ತು ನಮ್ಮ ಜ್ಯೂಡಿಷಿಯರಿ ಹೊರಗಡೆ ಹೇಗೆ ಇದೆ, ಅದೇ ರೀತಿ ನಮ್ಮ ಲೆಜಿಸ್ಲೇಚರ್ ಒಳಗಡೆ, ನಮ್ಮ ಪಾರ್ಲಿಮೆಂಟರಿ ಪದ್ಧತಿ ಒಳಗಡೆ, ಸ್ಪೀಕರ್ಸ್, ಮತ್ತು ಚೇರ್ಮನ್ಸ್ ಹಾಗೂ ಲೋಕಸಭಾ ಸ್ಪೀಕರ್ಸ್ ಹಾಗೂ ಚೇರ್ಮನ್ನಾಗಿರಲಿ, ಅದರಲ್ಲಿ ಅವರು ಸುಪ್ರೀಂ. ಅವರು ಕೊಟ್ಟಂತಹ ಯಾವುದೇ ತೀರ್ಪನ್ನು ಅವರು ನೀಡಿದಂತಹ ಯಾವುದೇ ನಡವಳಿಕೆಗಳನ್ನು ಅತ್ಯಂತ ಗೌರವದಿಂದ ಪಾಲಿಸತಕ್ಕಂತಹದ್ದೇ ಒಳ್ಳೆಯ ಸಂಸದೀಯ ಪಟುವಿನ ಕರ್ತವ್ಯ. ಆ ರೀತಿಯ ಒಳ್ಳೆಯ ಸಂಸದೀಯ ಪಟುವನ್ನು ಜನ ಆರಿಸಿದ್ದಾರೆ, ಆ ಜನರಿಗೆ ಗೌರವ ಬರಬೇಕಾದರೆ, ಆ ರೀತಿ ನಡೆದುಕೊಳ್ಳಬೇಕು, ಈ ಸದನದಲ್ಲಿ, ಜನರಿಗೆ ಅವಮಾನ ಮಾಡಬೇಕು ಎಂದು ಹೇಳಿದರೆ, ನಮ್ಮ ನಿಯಮಾವಳಿಗಳನ್ನು ಗಾಳಿಗೆ ತೂರಿ ನಾವು ನಡೆದುಕೊಂಡರೆ, ಈ ಸಭೆಯ ಆ ಸ್ಥಾನಕ್ಕೆ ಗೌರವ ಬರುವುದಿಲ್ಲ ಎನ್ನತಕ್ಕಂತಹದ್ದೇ ಬಹಳ ಪ್ರಧಾನವಾದುದು. ಅದಕ್ಕೆ ಇಂತಹದ್ದು ಉದಾಹರಣೆಗಳು ಇದ್ದಾವೆ. ನಾನು ನಾಳೆ ಅದನ್ನು ತಾವು ಅನುಮತಿ ಕೊಟ್ಟ ಮೇಲೆ ಚರ್ಚೆ ಮಾಡುತ್ತೇನೆ. ಆದರೆ ಒಂದು, ಕಣ್ಣಿಗೆ ಕಾಣತಕ್ಕಂತಹದ್ದು, ಪ್ರಿಲಿಮಿನರಿ ವಿಚಾರ ಏನು ಎಂದು ಹೇಳಿದರೆ, ತಮ್ಮ ತೀರ್ಪನ್ನು ಇಲ್ಲಿ ತಾವು ಓದಿದ್ದೀರಿ. ಆ ತೀರ್ಪಿನ ಬಗ್ಗೆ ರೀ-ಕನ್ಸಿಡರ್ ಮಾಡಬೇಕು ಅಂತ ಹೇಳುವುದು ಅವರ ಮನಸ್ಸಿನಲ್ಲಿ ಇದ್ದಿದ್ದರೆ, ತಾವು ತೀರ್ಪು ಹೇಳಿದ 5 ಗಂಟೆಗಳ ಕಾಲ ಸದನ ನಡೆದಿದೆ. ಒಂದು ಗಂಟೆಯಲ್ಲ, 5 ಗಂಟೆಗಳ ಕಾಲ ಈ ಸದನ ಅಂದು ನಡೆದಿದೆ. ಅವತ್ತು ರೀ-ಕನ್ಸಿಡರ್ ಮಾಡಿ ಎಂದು ಈ ಸದನದಲ್ಲಿ ಕೇಳಿದ್ದೇವೆ, ಬೇಕಾದಷ್ಟು ಸಮಯದಲ್ಲಿ, ಚೇರ್ಮನ್ರವರ, ಸ್ಪೀಕರ್ರವರ ರೂಲಿಂಗನ್ನು

ರೀ-ಕನ್ಸಿಡರ್ ಮಾಡಿ ಎಂದು ಕೇಳತಕ್ಕಂತಹ ಪದ್ಧತಿಗಳು ಬೇಕಾದಷ್ಟು ಇದ್ದಾವೆ. ಕೇಳುವಂತಹ ಅವಕಾಶ ಇತ್ತು. ಕೇಳಲಿಲ್ಲ, ಬೇಕಾಗಿಲ್ಲ. ಇನ್ನೂ ಹೆಚ್ಚು ಎವಿಡೆನ್ಸ್ ಇದ್ದರೆ, ಅವರ ಪೇಪರ್ ಕೋಟಿಂಗ್ಗೆ ನಾಳೆ ಹೋಗುತ್ತೇನೆ. ಇನ್ನೂ ಹೆಚ್ಚು ಎವಿಡೆನ್ಸ್ ಇದ್ದರೆ, ತಾವು ಈ ಸದನದಲ್ಲಿ ಅನಿರ್ದಿಷ್ಟ ಕಾಲದವರೆಗೆ ಮುಂದಕ್ಕೆ ಹಾಕಿರಲಿಲ್ಲ. ಸದನವನ್ನು 21ಕ್ಕೆ ಮುಂದುವರಿಸಿದ್ದಿರಿ. ಒಂದು ವಾರ ಕಾಲ ಹೆಚ್ಚು ಎವಿಡೆನ್ಸ್ ಇದ್ದಂತಹ ಪ್ರಕರಣಗಳಲ್ಲಿ ತಮ್ಮ ರೂಲಿಂಗನ್ನು ರೀ-ಕನ್ಸಿಡರ್ ಮಾಡಿ ಎಂದು ಕೇಳುವಂತಹ ಮನಸ್ಸು ನಮ್ಮ ವಿರೋಧ ಪಕ್ಷದ ನಾಯಕರಿಗೆ ಇದ್ದಿದ್ದರೆ, ಎವಿಡೆನ್ಸ್ ಇದ್ದಿದ್ದರೆ, ಈ ದಿನ 21ನೇ ತಾರೀಖು ಸದನ ಏನು ಸೇರಿದೆಯೋ, ಆ ಸದನದ ದಿವಸ ಬಂದು ತಂದು ಕೊಟ್ಟಿದ್ದರೆ, ತಾವು ಪರಿಶೀಲನೆ ಮಾಡುವಂತಹ ಅವಕಾಶ ತಮಗೂ ಇತ್ತು, ಅವರಿಗೂ ಇತ್ತು, ಈ ಸದನಕ್ಕೂ ಇತ್ತು.

ಎಲ್ಲಾ ನಿಯಮಗಳನ್ನು ಯಾವುದು ನಮ್ಮ ರೂಲ್ಸ್ ಪ್ರಕಾರ ಇದೆ, ಒಬ್ಬ ವಿರೋಧ ಪಕ್ಷದ ನಾಯಕರು ಸಾಮಾನ್ಯ ಸದಸ್ಯರು ಮಾಡಿದರೆ, ಒಂದು ಉದಾಹರಣೆ ಕೊಡುವುದಾದರೆ, ಮಾನ್ಯ ಅದ್ಯಂತಾಯರವರು ಛೇರ್ ಮೇಲೆ ಎದ್ದುನಿಂತುಕೊಂಡು ಸಭಾಧ್ಯಕ್ಷರಿಗೆ ಒಂದು ಪ್ರಕರಣ ಮಾಡಿದ್ದುದು ತಮಗೆ ಜ್ಞಾಪಕ ಇರಬಹುದು. ನಾವೆಲ್ಲಾ ಆಗ ಮೇಲ್ಮನೆಯಲ್ಲಿ ಇದ್ದೆವು. ಆ ಪ್ರಕರಣವನ್ನೇ ತೀವ್ರವಾಗಿ ತೆಗೆದುಕೊಂಡೆವು. ಇಂತಹ ಕರ್ನಾಟಕ ರಾಜ್ಯದ ವಿಧಾನ ಸಭೆ, ಕರ್ನಾಟಕ ರಾಜ್ಯದ ವಿಧಾನ ಪರಿಷತ್, ಕರ್ನಾಟಕದ ಪ್ರೊಸೀಡಿಂಗ್ಸ್ ಅಂದರೆ ಇಡೀ ದಕ್ಷಿಣ ಭಾರತವೇ ಅಲ್ಲ, ಇಡೀ ಭಾರತ ದೇಶದಲ್ಲಿ ಒಂದು ಪರಂಪರೆ ಇದೆ ನಮ್ಮ ನಡವಳಿಕೆಗಳಿಗೆ. ಜೆ.ಹೆಚ್. ಪಟೇಲ್ರವರು ಆಡಳಿತ ಪಕ್ಷದಲ್ಲಿದ್ದು ಮಂತ್ರಿಯಾಗಿದ್ದರು. ಆಗ ಮೇಲ್ಮನೆಯಲ್ಲಿ ನಾನು ವಿರೋಧಪಕ್ಷದಲ್ಲಿದ್ದೆ. ಒಂದು ಮಾತನ್ನು ನಾನು ಅವರನ್ನು ಕುರಿತು ಜೋರಾಗಿ ಖಾರವಾಗಿ ಹೇಳಿದೆ. ಆ ಸಮಯದಲ್ಲಿ ತಕ್ಷಣವೇ ಅವರೂ - ನಾನೂ ಇಬ್ಬರೂ ಕ್ಷಮಾಪಣೆ ಕೇಳಿದೆವು. ಅದೂ ಒಂದು ನಿಮಿಷದಲ್ಲಿ. ಅಷ್ಟೊಂದು ಗೌರವ ಇರತಕ್ಕಂತಹ ಈ ಪ್ರಜಾಪ್ರಭುತ್ವಕ್ಕೆ ಇವತ್ತು ಅವರೇ ವಿರೋಧಪಕ್ಷದ ನಾಯಕರೆ, ಇಂತಹ ಒಂದು ವಿಚಾರವನ್ನು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದಕ್ಕೆ ಆಧಾರ ಏನು? ಅವರು ನಿರ್ಣಯವನ್ನು ಮಂಡನೆ ಮಾಡಲಿ. ಅವರು ಹೇಳಿದ್ದು ಏನೆಂದರೆ ನಿರ್ಣಯವನ್ನು ಮಂಡನೆ ಮಾಡುತ್ತೇನೆ ಎಂದು. ಅದನ್ನು ಮಾಡಲಿ. ಅಥವಾ ಆಧಾರ ಏನಾದರೂ ಇದ್ದರೆ ಕೊಡಲಿ. ಮತ್ತೆ ಪ್ರಸ್ತಾವನೆ ಏನು? ತಾವು ಕನ್ಸಂಟ್ ಕೊಟ್ಟ ಹಾಗೇನೆ, ಅವರು ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹೇಗೆ? ಏನು? ಎಂಬತಕ್ಕಂತಹದ್ದ... ನೋಡಬೇಕಲ್ಲ

ಶ್ರೀ ಕೆ.ಎನ್. ನಾಗೇಗೌಡ : ಆಧಾರ ಯಾವಾಗ ಕೊಡಬೇಕೆಂಬುದನ್ನು ತಾವು ಅನುಮತಿ ಕೊಟ್ಟಮೇಲೆ....

ಶ್ರೀಮತಿ ಪ್ರಮೀಳ ನೇಸರ್ಗಿ : ಯಾವುದಾದರೂ ಇದ್ದರೆ ಹೇಳಲಿ. ಯಾವು... ಇಲ್ಲದೆ ಸುಮ್ಮನೆ ಹೇಳಿಕೊಂಡು ಹೋಗುತ್ತಿದ್ದರೆ, ಗಂಟೆ ಗಟ್ಟಲೆ, ನಾವು ಕೇಳಿಕೊ... ಕುಳಿತಿರೋಣವೇ?

(ಗೊಂದಲ)

ಶ್ರೀಮತಿ ಪ್ರಮೀಳ ನೇಸರ್ಗಿ : ನಿರ್ಣಯ ಮಂಡನೆ ಮಾಡುವುದಿದ್ದರೆ ಮಂಡನೆ ಮಾಡಲಿ. ಆಮೇಲೆ ತಾವು ಚರ್ಚೆಗೆ ತಮ್ಮ ಕನ್ಸಂಟ್ ಕೊಟ್ಟ ಮೇಲೆ ಬೇಕಾದರೆ ಚರ್ಚೆ ಮಾಡಲಿ.

ಅಧ್ಯಕ್ಷರು : ತಾವು ಏನು ಆಕ್ಷೇಪ ಎತ್ತಿದ್ದೀರಿ. ನಾನು ಬಹಳ ಜಾಗರೂಕತೆಯಿಂದ ಎಲ್ಲಾ ಮಾನ್ಯ ಸದಸ್ಯರ ಮಾತುಗಳನ್ನು ಕೇಳುತ್ತಾ ಇದ್ದೇನೆ. ಮತ್ತೊಮ್ಮೆ ದಯಮಾಡಿ ನಮ್ಮ ನಿಯಮಾವಳಿಗಳ ಕಡೆಗೆ ನೀವು ಗಮನ ಹರಿಸಿ. ಅವರು ಅಗತ್ಯಕ್ಕಿಂತ ಹೆಚ್ಚು ಹೇಳಿದಾಗ ನಾನೇ ಕಡಿವಾಣ ಹಾಕುತ್ತೇನೆ. ದಯಮಾಡಿ ನನ್ನ ಅಧಿಕಾರದಲ್ಲಿ ವಿಶ್ವಾಸ ಇಡಿ. ಸೈಟೇಷನ್ಸ್, ಯಾವ್ಯಾವ ಕೇಸು ಏನೇನಾಗಿದೆ, ಆ ಡೀಟೈಲ್ಸ್ ಎಲ್ಲಾ, ಸದನ ಅನುಮತಿ ಕೊಟ್ಟ ಮೇಲೆ ಮಾತ್ರ ಅವರು ಹೇಳುವುದಕ್ಕೆ ಅವಕಾಶ ಇದೆ. ನೀವು ನಿಮ್ಮ ಮನಸ್ಸಿನಲ್ಲಿ ಏನು ಇದೆ, ಆಧಾರ ಏನು ಇದೆ, ಎಂದು ನೀವು ಪ್ರತಿಯೊಬ್ಬರೂ, ನೀವೂ ಸನ್ಮಾನ್ಯ ನಂಜೇಗೌಡರು ಎಲ್ಲರೂ ಕೇಳಿದಾಗ ನೀವು ಏನು ಕೇಳುತ್ತೀರಿ ಎನ್ನುವುದೂ ಗೊತ್ತಿದೆ. ಎಲ್ಲರದ್ದೂ ಅದೇ ಆಧಾರ ಅಂದ ಮೇಲೆ, ನಿಮಗೆ ಮಾತನಾಡುವುದಕ್ಕೆ ಸುಲಭವಾಗುತ್ತದೆ. ನೀವು ಆತುರಾತುರವಾಗಿ ಎದ್ದು ಮಾತನಾಡಿದರೆ, ಅವರು ಹೊಸ ಆಧಾರ ಹುಡುವುದಕ್ಕೆ ಏಕೆ ಅವಕಾಶ ಮಾಡಿ ಕೊಡುತ್ತೀರಿ. ಸ್ವಲ್ಪ ಸುಮ್ಮನೆ ಇರಿ ದಯಮಾಡಿ.

ಶ್ರೀ ಕೆ.ಎನ್. ನಾಗೇಗೌಡ : ಒಂದು ಮನವಿಯನ್ನು ಶ್ರೀಮತಿ ಪ್ರಮೀಳರವರಲ್ಲಿ ಹೇಳತಕ್ಕಂತಹದ್ದು ಏನೆಂದರೆ, ಪತ್ರಿಕಾ ಹೇಳಿಕೆಗಳನ್ನು ಪತ್ರಿಕಾ ಗೋಷ್ಠಿಯನ್ನು ನೀವು ನಾವು ಬೇಕಾದಷ್ಟು ಅಡ್ರೆಸ್ ಮಾಡಿದ್ದೇವೆ. ಯಾವುದೋ ಒಂದು ಪತ್ರಿಕೆಯಲ್ಲಿ ಆ ಪತ್ರಕರ್ತರು ಬರೆದುಕೊಳ್ಳತಕ್ಕಂತಹ ವಿಚಾರವೇ ಬೇರೆ. Reporting is different, statement is different. ಇದು ಸ್ಟೇಟ್ಮೆಂಟ್ ಮಾಡಿರುವವರು ಯಾರು? ವಿರೋಧ ಪಕ್ಷದ ನಾಯಕರು ಮಾಡಿರುವಂತಹ ಸ್ಟೇಟ್ಮೆಂಟ್. ಪತ್ರಕರ್ತರು ಬರೆದಂತಹ ರಿಪೋರ್ಟ್ ಅಲ್ಲ ಇದು. ಯಾವುದೋ ವಿಚಾರ ಹೌದು, ರೇವಣ್ಣನವರ ವಿಚಾರದಲ್ಲಿ ಪತ್ರಕರ್ತರು ಬರೆದಂತಹ ರಿಪೋರ್ಟಿಂಗ್. ಸ್ಟೇಟ್ಮೆಂಟ್ ಅಲ್ಲ ಅದು. ಇದು ಮಾನ್ಯ ಯಡಿಯೂರಪ್ಪನವರು 11ನೇ ತಾರೀಖು ಕೊಟ್ಟಿರತಕ್ಕಂತಹ ಸ್ಟೇಟ್ಮೆಂಟ್. ಇದು ಸ್ಟೇಟ್ಮೆಂಟ್ (ಸ್ಟೇಟ್ಮೆಂಟ್ ಕಾಪಿಯನ್ನು ಸಭೆಗೆ ತೋರಿಸಿದರು)

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಯಾವ ರೇವಣ್ಣನವರ ಬಗ್ಗೆ ಹೇಳುತ್ತಿದ್ದಾರೆ? ಈ ಮನೆಯ ಸದಸ್ಯರ ಬಗ್ಗೆ ಹೇಳುತ್ತಿದ್ದರೆ ಅದಕ್ಕೆ ಅಧ್ಯಕ್ಷರ ಹತ್ತಿರ ಪರ್ಮಿಷನ್ ತೆಗೆದುಕೊಂಡಿದ್ದಾರೆಯೇ? ಅವರು ಯಾರ ಬಗ್ಗೆ ಹೇಳುತ್ತಿದ್ದಾರೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ನಾಗೇಗೌಡರು ಮಾತನಾಡಬೇಕು, ಬೇರೆಯವರು ಮಾತನಾಡುವುದಕ್ಕೆ ನೀವು ಅವಕಾಶ ಕೊಡಬೇಡಿ.

ಶ್ರೀ ಕೆ.ಎನ್. ನಾಗೇಗೌಡ : ನಾನ ಮಾತನಾಡುತ್ತೇನೆ, ಅವರು ಬಿಡಬೇಕಲ್ಲ, ಮಹಿಳೆಯರಿಗೆ ಗೌರವ ಕೊಡಬೇಕೆಂದು ಕೊಡುತ್ತಿದ್ದೇನೆ. ವಿರೋಧಕ್ಷದ ನಾಕರು ಅತ್ಯಂತ ಜವಾಬ್ದಾರಿ ಸ್ಥಾನದಲ್ಲಿರತಕ್ಕವರು. ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿರತಕ್ಕ ಹಿನ್ನೆಲೆಯಲ್ಲಿ ನಾಳೆ ನಾನು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತೇನೆ. ಈ ವಿಚಾರದಲ್ಲಿ ಕಟ್ಟುನಿಟ್ಟಾದ ನಿಯಮಗಳು ಇದ್ದರೂ ಸಹ ಸಂಪ್ರದಾಯಗಳನ್ನು ಗಾಳಿಗೆ ತೂರಿ ಅತ್ಯಂತ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಒಬ್ಬ ನಾಯಕರು ಸಭಾಧ್ಯಕ್ಷರು ನೀಡಿದಂತಹ ತೀರ್ಪಿಗೆ ಅದನ್ನು ಇವತ್ತಿನ ದಿವಸ ಹೊರಗಡೆ ಪ್ರಶ್ನಿಸಿದ್ದಾರೆ. ಅದು ನಿಜವಾಗಲೂ ಪ್ರಿವಿಲೇಜನ್ನು ಅಟ್ರಾಕ್ಟ್ ಮಾಡತಕ್ಕದ್ದು, ಅದು ಇಡೀ ಸದನಕ್ಕೆ ಅಗೌರವ ತಂದಿದೆ. ಈ ಸದನದ ಗೌರವವನ್ನು ಮತ್ತು ಪ್ರತಿಷ್ಠೆಯನ್ನು ಕಾಪಾಡತಕ್ಕದ್ದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಿಮ್ಮ ಗೌರವವನ್ನು ಕಾಪಾಡತಕ್ಕದ್ದು ಸಹ ನಮ್ಮ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯಿಂದ ಯಾರೂ ಸಹ ಹೊರಗೆ ಹೋಗುವುದಕಕೆ ಸಾಧ್ಯವಾಗುವುದಿಲ್ಲ. ನಾವೇನು ಈಗ ನೋಟೀಸ್ ಕೊಟ್ಟಿದ್ದೇವೆ ಅದನ್ನು ಅಡ್ಮಿಟ್

ಮಾಡಿಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕು ನಾಳೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ, ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಸಭಾಧ್ಯಕ್ಷರೆ, ಸದನದ ನಿಯಮಾವಳಿ ಪ್ರಕಾರ ತಮ್ಮ ಅನುಮತಿ ಬೇಕಾಗುತ್ತದೆ ಈವೊಂದು ನಿರ್ಣಯವನ್ನು ಮಂಡನೆ ಮಾಡುವುದಕ್ಕೆ. ಯಾವ ರೀತಿ ಹೋಗಬೇಕೆನ್ನುವ ಬಗ್ಗೆ ನಿಯಮ 191ರಿಂದ ಮುಂದಿನ ನಿಯಮಾವಳಿಗಳು ಅದನ್ನು ಸಾರಿ ಹೇಳುತ್ತೇವೆ. ತಾವು ಹೇಳುವ ಹಾಗೆ ಇನ್ನು 194ರಲ್ಲಿದ್ದೇವೆ, ಅದು ನಿಜ. 195ರ ವಿಚಾರ ಬರತಕ್ಕದ್ದು ಅನಂತರ ತಾವು ಅನುಮತಿಯನ್ನು ಕೊಟ್ಟಮೇಲೆ, ವಿಷಯಗಳು ಬರುತ್ತವೆ. ಅನುಮತಿ ವಿಚಾರ ಅಂದರೆ ಇಷ್ಟೆ, ಅನುಮತಿಯನ್ನು ಕೊಡುವುದಕ್ಕೋಸ್ಕರ ನಾವು ಯಾವ ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ ಅದಕ್ಕೆ ಬೇರೆ ಮತ್ತೊಂದು ಅಭಿಪ್ರಾಯ ಹೇಳತಕ್ಕ ಪ್ರಯತ್ನ ನೆಡಯಬಹುದು ಎನ್ನುವುದು ನನ್ನ ನಿರೀಕ್ಷೆ. ಅದೇನೆಂದರೆ ಮಾನ್ಯ ಸದಸ್ಯರಾದ ರೆಡ್ಡಿಯವರು (ಸಿಪಿಎಂ) ಮಾನ್ಯ ಸದಸ್ಯರಾದ ನಾಗೇಡೌಡರು ಏನು ಹೇಳಿದ್ದಾರೆ ಅದಕ್ಕಿಂತ ವಿಭಿನ್ನವಾಗಿ ಮತ್ತೊಂದು ಭಾಗವನ್ನು ನಾನೇನು ಮಂಡನೆ ಮಾಡುತ್ತಿಲ್ಲ. ಏಕೆಂದರೆ ನಿರ್ಣಯ ವಿಷಯಕ್ಕೆ ಮುರ್ನಾಲ್ಕು ನಿರ್ಣಯಗಳು ಒಂದೇ ರೀತಿಯಿರುವುದರಿಂದ ವಿವರಗಳಿಗೆ ಹೋಗತಕ್ಕ ಅವಶ್ಯಕತೆ ಇಲ್ಲ ಹಾಗೂ ಪುನರಾವರ್ತನೆಯಾಗುವುದು ಬೇಡ, ಕಾಲವನ್ನು ಉಳಿಸೋಣವೆನ್ನತಕ್ಕ ದೃಷ್ಟಿಯಿಂದ ನಾನು ಮಾನ್ಯ ಸಭಾಧ್ಯಕ್ಷರ ಗಮನವನ್ನು ಸೆಳೆಯುತ್ತೇನೆ. ನಾನು ವಿವರಗಳನ್ನು ಮತ್ತೊಮ್ಮೆ ಕೆಣಕುವುದಕ್ಕೆ ಹೋಗುವುದಿಲ್ಲ. ನಿರ್ಣಯದ ಬಗ್ಗೆ ತಾವು ಚರ್ಚೆಗೆ ಅವಕಾಶ ಕೊಟ್ಟಾಗ ವಿವರವಾಗಿರತಕ್ಕ ಚರ್ಚೆಗ್ ಹೋದಾಗ ಅವುಗಳನ್ನು ಪ್ರಸ್ತಾಪ ಮಾಡತಕ್ಕ ಅವಕಾಶ ಸಿಗುತ್ತದೆ. ಇಲ್ಲಿರತಕ್ಕ ಪ್ರಶ್ನೆ ಇಷ್ಟೆ, ತಾವು ಸದನದಲ್ಲಿ ತಮ್ಮ ರೂಲಿಂಗನ್ನು ಅಥವಾ ತೀರ್ಪನ್ನು ಕೊಟ್ಟ ಮೇಲೆ ಅದನ್ನು ಪ್ರಶ್ನೆ ಮಾಡಿರತಕ್ಕ ವಿಷಯ. ಕೇಳಬಹುದು, ಇದಕ್ಕೆ ಈ ಅಭಿಪ್ರಾಯಕ್ಕೆ ವಿರೋಧವಾಗಿರತಕ್ಕ ಸದಸ್ಯರು ಈ ಸದನದಲ್ಲಿ, ಯಾರೇ ಇರಬಹುದು. ಅವರು ಏನು ಹೇಳೂಬಹುದು, ಅಂದರೆ ಮೊನ್ನೆ ತಾನೇ ಪತ್ರಿಕಾ ವಿಷಯವನ್ನು ಕವರ್‌ನಲ್ಲಿ ವಿರೋಧಪಕ್ಷದ ನಾಯಕರು ತಮಗೆ ಕಳುಹಿಸಿದಾಗ ಪತ್ರಿಕೆಗಳಲ್ಲಿ ಅಚ್ಚಾಗಿ ಬಂದತಕ್ಷಣ ಅದನ್ನು ಆಧಾರವಾಗಿಟ್ಟುಕೊಳ್ಳಬಾರದು ಆದ್ದರಿಂದ ಅದು ಕಾರಣವಾಗುವುದಿಲ್ಲ ತೀರ್ಪನ್ನು ಮೊನ್ನೆತಾನೇ ಕೊಟ್ಟಿರತಕ್ಕ ರೂಲಿಂಗ್‌ನಲ್ಲಿ ತಾವು ಹೇಳಿದ್ದೀರಿ. ಆ ವಿಚಾರದಲ್ಲಿ ಮಾನ್ಯ ನಾಗೇಗೌಡರು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದು ನಾವೆಲ್ಲರೂ ಸೇರಿ ಗಮನಿಸಬೇಕಾದ ಅಂಶ. ಅಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಸೀಲಾಗಿರತಕ್ಕ ಲಕೋಟೆಯಲ್ಲಿ, Xerox copies of the matter that appeared in some section of the Press (weekly or daily) ಅದು ಏನಿದೆಯಲ್ಲಿ ಅದು ಅವರೇ ಬರೆದುಕೊಂಡಿದ್ದು. ಬಹಳ ಸೂಕ್ಷ್ಮವಾಗಿ ಇದನ್ನು ನಾವು ಗಮನಿಸಬೇಕು. ಅದು ರಿಪೋರ್ಟೆಡ್ ಅಥವಾ ಬರೆದುಕೊಂಡಿದ್ದೊ ಇತ್ಯಾದಿ ಅದನ್ನು ಅವರು ಅಚ್ಚು ಹಾಕಿಸಿಕೊಂಡಿದ್ದಾರೆ. ಯಾರು ಏನು ಅಲ್ಲಿ ಪತ್ರಿಕಾಗೋಷ್ಠಿ ಕರೆದು ಮತ್ತೊಂದು ಮಾಡಿ ಹೇಳಿರತಕ್ಕದ್ದು ಅಲ್ಲ, ಅದಕ್ಕಾಗಿ ತಮ್ಮ ತೀರ್ಪು ಸರಿಯಾಗಿತ್ತು, ಅದನ್ನು ಅಧಾರವಾಗಿಟ್ಟು ನಾವು ವಿಚಾರ ನೋಡುವುದಕ್ಕೆ ಬರುವುದಿಲ್ಲವೆನ್ನತಕ್ಕ ತೀರ್ಪು ತಾವು ಹೇಳಿದ್ದೀರಿ. ಆ ವಿವರಗಳಿಗೆ ನಾನು ಹೋಗುವುದಿಲ್ಲ, ಇಲ್ಲಿರತಕ್ಕ ವಿಷಯ ಪ್ರತ್ಯೇಕ.ಮಾನ್ಯ ವಿರೋಧಪಕ್ಷದ ನಾಯಕರು 10ನೇ ತಾರೀಖು if I remember correctly the date, all these things have appeared on 11th, the very next day

in the press. ಪತ್ರಿಕಾಗೋಷ್ಠಿಯನ್ನು ಕರೆದು ಹೇಳಿರತಕ್ಕ ಮಾತು. ನಾವು ಅದಕ್ಕಾಗಿಯೇ ಬಹಳ ಎಚ್ಚರಿಕೆಯಿಂದ ಈ ಮಾತನ್ನು ಆಡಬೇಕಾಗುತ್ತದೆ. ತಾವು ತೀರ್ಪು ಕೊಡತಕ್ಕ ಸಂದರ್ಭದಲ್ಲಿ ಈ ಸದನದ ಸದಸ್ಯರು ಮಾನ್ಯ ಯಾರೇ ಆದರೂ ಅವೊತ್ತು ತಾವೇ ತೀರ್ಪು ಕೊಟ್ಟಿದ್ದೀರಿ ಈ ಪತ್ರಿಕೆಯಲ್ಲಿ ಅಚ್ಚಾಗಿರತಕ್ಕ ವಿಷಯದಲ್ಲಿ ಅಂದರೆ ಕ್ಷಮಿಸಬೇಕು. ಮಾನ್ಯ ಸಭಾಧ್ಯಕ್ಷರೆ ಆ ವಿಷಯ ಪ್ರತ್ಯೇಕ. ಪತ್ರಿಕಾಗೋಷ್ಠಿಯ ವಿಷಯ ಪ್ರತ್ಯೇಕ. ಆದ್ದರಿಂದ ಪತ್ರಿಕಾಗೋಷ್ಠಿಯಲ್ಲಿ ಬಂದಿರತಕ್ಕ ವಿಷಯದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಏನಾದರೂ ಅನಂತರ ಅವರು ರಿಜಾಯಂಜರ್ ಏನಾದರೂ ಪತ್ರಿಕೆಯಲ್ಲಿ ಕೊಟ್ಟಿದ್ದರೆ. ಒಂದು ವೇಳೆ,ಇಲ್ಲ ಇಲ್ಲ ನಾನು ಹಾಗೆ ಹೇಳಿಲ್ಲ, ಹೀಗೆ ಹೇಳಿದ ಇತ್ಯಾದಿ. ಹಾಗೇನಾದರೂ ಅವರು ಹೇಳಿದ್ದರೆ ಅದನ್ನು ವಿಚಾರ ಮಾಡುವುದಕ್ಕೆ ಸಾಧ್ಯ, ಈ ಸದನಕ್ಕೆ ಬರುತ್ತದೆ. ನಾವು ಇಲ್ಲಿಯವರೆಗೂ ಅದನ್ನು ಕಂಡಿಲ್ಲ, ಅವರು ವಿಷಾದ ನಾನು ಹೇಳಕೊಂಡಿದ್ದೇನೆ.ಅದನ್ನು ನಾನು ಹೇಳುವುದಲ್ಲ, ಅಲ್ಲಿ ಬಂದುರತಕ್ಕದ್ದು ಮುರ್ನಾಲ್ಕು ಅಂಶಗಳು ಪ್ರಸ್ತಾಪವಾಗಿವೆ. ಆ ವಿಷಯಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ನೇರವಾಗಿ ತಮ್ಮ ರೂಲಿಂಗನ್ನು ಪ್ರಶ್ನೆ ಮಾಡಿರತಕ್ಕದ್ದು ಸದನದ ಹೊರಗಡೆಯಲ್ಲಿ. ಅದನ್ನು ಮಾಡುವುದಕ್ಕೆ ಯಾರಿಗೂ ಅಧಿಕಾರವಿಲ್ಲ ಎನ್ನತಕ್ಕ ಅಭಿಪ್ರಾಯವನ್ನು ಸದನದ ಮಾನ್ಯಸದಸ್ಯರು ಇನ್‌ಕ್ಲೂಡಿಂಗ್ ಬಿಜೆಪಿ ಅವರು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಏಕೆಂದರೆ ಇವತ್ತು ಎಲ್ಲ ಕಡೆಯಲ್ಲು ಕೂಡ ಇಡೀ ಭಾರತ ರಾಷ್ಟ್ರದಲ್ಲಿ ಅವರ ಪಕ್ಷ ಕೂಡ ಕೆಲವು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ ಎನ್ನತಕ್ಕದ್ದನ್ನು ತಾವು ಮರೆಯಬಾರದು. ನಿಯಮಾವಳಿಗಳು ಸ್ವಲ್ಪ ಹೆಚ್ಚು ಕಡಿಮೆ ಅಲ್ಲಿ ಇಲ್ಲಿ ಒಂದೇ ರೀತಿಯಲ್ಲಿ ಬರುತ್ತೇವೆ. All these things are almost drawn from our Mother Parliament.

ಪಾರ್ಲಿಮೆಂಟ್‌ನಲ್ಲಿ ಏನು ಬಂದಿದೆ they have drawn from our Mother parliament i.e., ಹೌಸ್ ಆಫ್ ಕಾಮಾನ್ಸ್ ಇತ್ಯಾದಿ ನಾವೆಲ್ಲ ಡ್ರಾ ಮಾಡಿಕೊಂಡು ಬಂದಿದ್ದವೆಂದು ಅದನ್ನು ಕೊಟೇಟ್ ಮಾಡುತ್ತಾರೆ. ಮೇಸ್ ಪಾರ್ಲಿಮೆಂಟರಿ ಪ್ರಾಕ್ಟೀಸ್ ಇರಬಹುದು, ಸಹಕಾಲ್ ಅಂಡ್ ಶಕ್ಧರ್ ಇರಬಹುದು ಮತ್ತೊಂದು ಇರಬಹುದು.ಆ ವಿವರಗಳು ಬಂದಾಗ ಅದನ್ನು ನಾವು ಚರ್ಚೆ ಮಾಡೋಣ. ಇಲ್ಲಿ ಒಂದು ರೂಲಿಂಗನ್ನು ತಾವು ಕೊಟ್ಟಮೇಲೆ ಅದನ್ನು ಪ್ರಶ್ನೆ ಮಾಡುವುದಕ್ಕೆ ಹಕ್ಕು ಒಬ್ಬರಿಗೂ ಕಾಡ ಬರುವುದಿಲ್ಲ, ಎಷ್ಟೋ ಸಾರಿ ನಮ್ಮ ಮನಸ್ಸಿಗೆ. ಏಕೆಂದರೆ ತಾವು ರೂಲಿಂಗ್ ಕೊಡಬೇಕಾದರೆ ತಮ್ಮ ಜಾಗದಲ್ಲಿ ನಾನಿದ್ದರೆ ಏನಾಗುತ್ತದೆ. ಎನ್ನುವುದನ್ನು ವಿಚಾರ ಮಾಡಿಕೊಳ್ಳಬೇಕು. ಕೊಟ್ಟಿರತಕ್ಕ ರೂಲಿಂಗ್ ಎಲ್ಲರಿಗೂ ಸಮಾಧಾನ ತರತಕ್ಕ ರೂಲಿಂಗ್ ಒಂದೊಂದು ಸಾರಿ ಅದು ಪರಿವರ್ತನೆಯಾದರೆ ಅದು ಸಂತೋಷದ ಸಂಗತಿಯಾಗುತ್ತದೆ. ಒಂದೊಂದು ಸಾರಿ ಹಾಗೆ ಆಗುವುದಿಲ್ಲ, ಅದು ಬಹುಪಾಲು ಸದಸ್ಯರಿಗೆ ಆದರೆ ಮಾನ್ಯ ಸದಸ್ಯರು ಒಬ್ಬರೋ ಇಬ್ಬರೋ ಅಥವಾ ಒಂದು ಪಕ್ಷಕ್ಕೂ ಕೆಲವೊಮ್ಮೆ ನೋವಾಗತಕ್ಕ ಸಂದರ್ಭ ಬಂದರೂ ಕೂಡ ನಮ್ಮ ಅನುಭವದ ಹಿನ್ನೆಲೆ, ಇದು ಔದಾರ್ಯದ ಪ್ರಶ್ನೆಯಲ್ಲ ಸದನದ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆದುಕೊಂಡು ಹೋಗಬೇಕು ಎನ್ನತಕ್ಕ ಸದುದ್ದೇಶದಿಂದ ನಾವೇನು ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ ಆ ಪ್ರಕಾರ ತಾವೊಂದು ತೀರ್ಪನ್ನು ಕೊಟ್ಟಾಗ ಅದನ್ನು ಮನಸಾರೆ ಒಪ್ಪಿ ಬಹುಮತದ ಅಭಿಪ್ರಾಯವನ್ನು

ಗಮನದಲ್ಲಿಟ್ಟು ಮುಂದಕ್ಕೆ ಹೋಗತಕ್ಕದ್ದು ಜಾಣ್ಮೆ ಸಂಸದೀಯ ವ್ಯವಹಾರಗಳ ಕೌಶಲ. ಮತ್ತು ಅದರಲ್ಲಿಟ್ಟಿರತಕ್ಕ ಅಪಾರ ನಂಬಿಕೆಯ ಪ್ರತೀಕವಾಗಿ ಅದು ಪರಿಣಾಮಗೊಳ್ಳುತ್ತದೆ. ಈ ವಿಚಾರವನ್ನು ನಾವು ಯಾವಾಗಲೂ ಗಮನದಲ್ಲಿಡಬೇಕು. ನಾಳೆ ತಾವು ನಿರ್ಣಯದ ಚರ್ಚೆಗೆ ಅನುಮತಿ ಕೊಟ್ಟರೆ ಆ ವಿಚಾರವನ್ನು ನಾನು

ಆಮೂಲಾಗ್ರವಾಗಿ ಪ್ರಸ್ತಾಪ ಮಾಡುವುದಕ್ಕೆ ಸಿದ್ಧವಾಗಿದ್ದೇನೆ. ಆದರೆ ಪಾರ್ಲಿಮೆಂಟ್ ಇರಬಹುದು, ಅಥವಾ ಇಲ್ಲೇ ಇರಬಹುದು. ಈ ಸನದ ಅಥವಾ ಮತ್ತೊಂದು ಮೇಲ್ಮನೆ. ಯಾವುದೇ ಸಂದರ್ಭದಲ್ಲಾದರೂ ನಾವು ಸಭಾಧ್ಯಕ್ಷರ ಬಗ್ಗೆ ಇವತ್ತು ಏನಾದರೂ ಅಗೌರವದ ಮಾತನ್ನು ಆಡಿದ್ದರೆ. ಆ ಅಭಿಪ್ರಾಯ ಬರುವ ರೀತಿಯಲ್ಲಿ ಆಡಿದ್ದರೆ. ಆ ಅಗೌರವ ತಮಗಲ್ಲ ಅದು ಇಡೀ ಸದನಕ್ಕಾಗುತ್ತದೆ. ಏಕೆಂದರೆ,

7.50 ಪಿ.ಎಂ.

we are the creation of the entire House here. ನಾವೇ ಕ್ರಿಯೇಟ್ ಮಾಡಿದವರು. The Chair is created by us and you have been unanimously elected by all cross sections of this August House to occupy that Chai, to maintain tha dignity and decorm of this August House, Moreover, you are the supreme custodian of this House to regulate the proceedings and to safeguard the interests and also the rights of Hon.Members of this House irrespective of the party they may belong to. ನಾವು ಇಷ್ಟೊಂದು ಅಧಿಕಾರ ತಮಗೆ ಕೊಟ್ಟಮೇಲೆ, ನಾವೇ ತಮ್ಮನ್ನು ಅಲ್ಲಿ ಕೂರಿಸಿ, ನಾವೇ ರೂಲಿಂಗ್ ಕೊಡತಕ್ಕಂಥ ನಿಯಮಾವಳಿಗಳನ್ನು ರಚನೆ ಮಾಡಿದ್ದೇವೆ. ನಾವೇ ಪ್ರಶ್ನೆ ಮಾಡುತ್ತಾ ಹೋಗಿ ಅಗೌರವ ಆ ಮೂಲಕ ಉದ್ಭವವಾದರೆ ಅದು ಇಡೀ ಸದನದ ಘನತೆ ಗೌರವದ ಪ್ರಶ್ನೆಯಾಗಿ ಪರಿಣಾಮಗೊಳ್ಳುತ್ತದೆ. ಅವಸಾನಗೊಳ್ಳುತ್ತದೆ. ಇಲ್ಲಿ ಆಗಿರುವಂತಾದ್ದೇ ಅದು. ಇದು ಒಂದು ವಿಷಯ. ನಮ್ಮ ಸೂಚನೆಯಲ್ಲಿ ನಾವು ಅದನ್ನು ಪ್ರಸ್ತಾಪ ಮಾಡಿದ್ದೇವೆ. ನಾನೂ ಮಾಡಿದ್ದೇನೆ. ಹಾಗೂ ಮಾನ್ಯ ಸದಸ್ಯರುಗಳು ಯಾರ್ಯಾರು ಕಳುಹಿಸಿದ್ದಾರೆ ಅವರು ಮಾಡಿದ್ದಾರೆ. ಅದಕ್ಕಾಗಿ ಈ ನಿರ್ಣಯವನ್ನು ಆಡ್ಮಿಟ್ ಮಾಡಿ ಮಾನ್ಯ ಸಭಾಧ್ಯಕ್ಷರೆ ತಮ್ಮ ಗಮನಕ್ಕೆ ತರತಕ್ಕಂಥಾದ್ದು......ಮಾನ್ಯ ಸಭಾಧ್ಯಕ್ಷರು ಸ್ವಲ್ಪ ಈ ಕಡೆ ಗಮನ ಹರಿಸಬೇಕು........

ಅಧ್ಯಕ್ಷರು : ಕಾಲೇಜಿನಲ್ಲಿ ಇದ್ದಾಗ ಇಷ್ಟು ಓದಿರಲಿಲ್ಲ, ನಮಗೆ ಅಷ್ಟೊಂದು ಕೆಲಸ ಕೊಟ್ಟುಬಿಟ್ಟದ್ದೀರಿ. ಕಾಲೇಜಿನಲ್ಲಿ ಓದಿದ್ದರೆ ಇಷ್ಟು ತೊಂದರೆ ಬರುತ್ತಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ : ನಾನು ಈಗ ತಮ್ಮ ಗಮನ ಸೆಳೆಯುತ್ತಿರುವುದು ಏನೆಂದರೆ, ಇವತ್ತು ತಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡಿರುವಂಥಾದ್ದು ಒಂದೇ ಆಧಾರ ಸಾಕು ನಿರ್ಣಯದ ಚರ್ಚೆಗೆ ಅನುಮತಿ ಕೊಡುವುದಕ್ಕೆ.ಬೇರೆ ವಿಷಯ ಮತ್ತೊಂದು ಇಲ್ಲ, ಅದು ಬೇರೆ. That itself is enough for you to consider that and then give complete assent or consent to mve the Motion of Breach of privilege relating to you and the Chair occupied by you and also to safeguard the rights and interests of the hon.Members of this August House. ಇದು ಒಂದು ವಿಷಯ. ಮತ್ತೊಂದು ವಿಷಯದ ಪ್ರಸ್ತಾಪ ಕೂಡ ಇದರಲ್ಲಿ ಅಡಗಿದೆ. ಸದನದಲ್ಲಿ ಕೊಲೆಗಡುಕರು ಅಥವಾ ಕ್ರಿಮಿನಲ್ಸ್ ಇತ್ಯಾದಿ, ಇತ್ಯಾದಿಗಳಿಗೆ ರಕ್ಷಣೆ ಕೊಡ ತಕ್ಕಂಥವರು ಕೂಡ ಈ ಸದನದಲ್ಲಿ ಇದ್ದಾರೆ........

Mr.Speaker : May help you. ಅದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ಬಹುಶಃ ತಾವು ಆಧಾರ ಪಡುತ್ತಿರುವ ವಿಷಯ. ಕೊಲೆಗಡುಕರು ಎನ್ನುವ ಪದ ಅವರು ಉಪಯೋಗಿಸಿಲ್ಲ,ಅದು ವರದಿಯೂ ಸಹ ಆಗಿಲ್ಲ, ಸಮಾಜಘಾತಕರು ಎಂದು ಇದೆ. ಅದನ್ನು ಸ್ವಲ್ಪ ನೋಡಿಕೊಂಡು ಹೇಳಿಬಿಟ್ಟರೆ ಒಳ್ಳೆಯದು, ಅದೆಲ್ಲಾ ಏಕೆ ರೆಕಾರ್ಡ್‌ಗೆ ಹೋಗಬೇಕು ಎಂದು.

ಶ್ರೀ ಎಸ್. ಬಂಗಾರಪ್ಪ : ಪರವಾಗಿಲ್ಲ. .ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದು ಪತ್ರಿಕೆಯಲ್ಲಿ ಬಂದಿರುವುದಂತೂ ನಿಜ. ಆ ವಿವರವನ್ನು ಆಮೇಲೆ ನೋಡೋಣ. ಆದು ವಿಷಯಾಂತರ ಆಗುವುದು ಬೇಡ.

ಶ್ರೀಮತಿ ಪ್ರಮೀಳಾನೇಸರ್ಗಿ : ಆ ತರಹ ಹೇಳಲಿಲ್ಲ ಎಂದು ಪತ್ರಿಕೆಯಲ್ಲಿ ಡಿನ್ನೆ ಕೂಡ ಬಂದಿದೆ. ಡಿನ್ನೆ ಬಂದ ಮೇಲೂ ಕೂಡ ಹೇಳುತ್ತಿದ್ದೀರಿ ನೀವು ಮುಖ್ಯಮಂತ್ರಿಗಳಾಗಿದ್ದಿರಿ, ವಿರೋಧ ಪಕ್ಷದ ನಾಯಕರು ಆಗಿದ್ದಿರಿ, ಈ ಸ್ಥಾನದಲ್ಲಿ ವಿರೋಧ ಪಕ್ಷದ ನಾಯಕರಾಗಿ ಸ್ಪೀಕರ್‌ಗೆ ಹೋಗಿ ಹೊಡೆದು,ಅವರು ಕೇಳಿದರೆ ಟೂ-ಹೂಟ್ಸ್ ಎಂದು ಹೇಳಿದ್ದೀರಿ, ಅದಕ್ಕಿಂತ ದೊಡ್ಡ ಕೆಲಸ ಏನು ಮಾಡಿದ್ದಾರೆ ಇವರು. ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ : ನಿಮಗೆ ಅರ್ಥವಾಗಲಿಲ್ಲ ಎಂದರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ, ಅರ್ಥ ಆಗುವ ರೀತಿಯಲ್ಲಿ ಕಾನೂನು ಪ್ರಕಾರ ನಾವು ಹೇಳುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ಪೇಪರ್‌ನಲ್ಲಿ ಓದಿದ್ದೀರಿ......

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ರಾಮಕೃಷ್ಣ ಹೆಗಡೆಯವರನ್ನು ಕೋಳಿ, ನರಿ, ದೊಡ್ಡ ಮೆಣಸಿನಕಾಯಿ, ಚಿಕ್ಕ ಮೆಣಸಿನಕಾಯಿ, ಇದೆಲ್ಲಾ ಏನು? ನಾನು ಇಲ್ಲಿ ಸಭಾಧ್ಯಕ್ಷರ ಹತ್ತಿರ ಮೈಕ್ ತೆಗೆದು ಕಿತ್ತು ಹಾಕಿದರು....

ಅಧ್ಯಕ್ಷರು : ಆಗ ತಾವು ಎಲ್ಲಿದ್ದಿರಿ, ಅಲ್ಲಿರಲಿಲ್ಲ, ಇಲ್ಲೆ ಇದ್ದಿರಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ.......

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾವು ನಿಮ್ಮ ಹತ್ತಿರ ತುಂಬಾ ಎಕ್ಸ್‌ಪೆಕ್ಟ್ ಮಾಡುತ್ತಿದ್ದೇವೆ ಆದರೆ.....

ಶ್ರೀ ಎಸ್. ಬಂಗಾರಪ್ಪ : ಅದು ಇವತ್ತಲ್ಲ, ನಾಳೆ.

ಅಧ್ಯಕ್ಷರು : ನೀವು ಡಿಸಾಪಯಿಂಟ್ ಮಾಡುತ್ತಿದ್ದೀರಿ.ಎಂದು

ಶ್ರಿ ಕೆ.ಎಸ್. ಈಶ್ವರಪ್ಪ : ದೆವ್ವದ ಬಾಯಿಯಲ್ಲಿ ಭಗವದ್ಗೀತೆ ಬಂತು ಎನ್ನುವ ಒಂದು ಗಾದೆ ನೆನಪಿಗೆ ಬರುತ್ತಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : Sir, the Committee on Privilege of teh Houst has recommended:\

"The Committee recommend that Sri S. Bangarappa be called to the Bar of the House and be reprimanded and admonished. He be warned to be more careful in making wild and baseless allegations against the hon.Members."\

ಅದು ನಾನಲ್ಲಿ ಹೇಳಿದ್ದುದು. ಪ್ರಿವಿಲೇಡ್ ಕಮಿಟಿ ಹೇಳಿರುವುದು.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ: ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಯಾವುದೋ ಒಂದು ಕಮಿಟಿ ರೆಕಮೆಂಡೇಷನ್

Committee recommendation is dittere nt Questionining the same Gold is ditterent ಕಮಿಟಿ ರೆಕಮೆಂಡೇಷನ್ ವಿಚಾರಗಳು ಬೇರ. ನೀವು ಕಮಿಟಿ ರೆಕಮೆಂಡೇಷನ್ ವಿಚಾರ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಅದು ಪ್ರಿವಿಲೇಜ್ ಆಗುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಇದೆ. ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಹೇಳಿದ ವಿಷಯ ಈ ಸದನದ 10ನೇ ವಿಧಾನಸಭೆಗೆ ಸಂಬಂಧಪಟ್ಟಂತಹ ವಿಷಯವೋ ಅಥವಾ ಇದರ ಹಿಂದಿನ ಸಭೆಗೆ ಸಂಬಂಧಪಟ್ಟಂತಹ ವಿಷಯವೋ ಎಂದು ಸ್ಪಷ್ಟ ಮಾಡಿ. ಹಿಂದಿನ ವಿಧಾನಸಭೆ ಎಂದರೆ, 8ನೇ ವಿಧಾನಸಭೆಯಲ್ಲಿ ಆಗಿರತಕ್ಕಂಥ ತೀರ್ಮಾನದ ವಿಷಯವನ್ನು 10ನೇ ವಿಧಾನ ಸಭೆಯಲ್ಲ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಇದು ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಯಾವತ್ತೋ ಆಡದನ್ನು ಇವತ್ತು ಬದಲಾಯಿಸುವುದಕ್ಕೆ ಆಗುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ : ವಿಷಯ ಪ್ರಸ್ತಾಪ ಮಾಡಿದ ಮೇಲೆ ಅವರು ಏನು ಉತ್ತರ ಕೊಡುತ್ತಾರೆ. ತಾವೂ ಕೂಡ ಮಾನ್ಯ ಸದಸ್ಯರು ಇದ್ದೀರಿ.....

ಶ್ರೀಹೆಚ್.ಎನ್. ನಂಜೇಗೌಡ : ಅವರು ಏನು ಹೇಳಿದ್ದೆಂದರೆ ಭೂತ ವೇದಾಂತ ಹೇಳಿತು ಎಂದು ಕೇಳುವುದಕ್ಕೆ ಹೋದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷಾರೆ, ನನ್ನ ಕ್ರಿಯಾಲೋಪದ ಬಗ್ಗೆ ತಮ್ಮ ತೀರ್ಪನ್ನು ಕೊಟ್ಟು ಆಮೇಲೆ ಮುಂದುವರೆಸಬೇಕು.ಎಂದು ನನ್ನ ಅಭಿಪ್ರಾಯ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಇದು ಬಹಳ ಸೀರಿಯಸ್ ಪಾಯಿಂಟ್ ಒಂದು ಕಮಿಟಿ ಎಂಟನೇ ವಿಧಾನ ಸಭೆಯಲ್ಲಿ ಮಾನ್ಯ ಬಂಗಾರಪ್ಪನವರು ಅಡ್‌ಮಾನಿಷ್ ಮಾಡಬೇಕು, ಮತ್ತೊಂದು ಮಾಡಬೇಕು ಎಂದು ರೆಕಮೆಂಡ್ ಮಾಡಿದೆ. ಆ ಕಮಿಟಿ ರಿಪೋರ್ಟ್ ಹೌಸಿಗೆ ಬಂದು ಆದು ಹೌಸ್‌ನಲ್ಲಿ ಅಕ್ಸೆಪ್ಟ್ ಮಾಡಿಕೊಳ್ಳುವವರೆಗೆ ಅವರು ಅದನ್ನು ಹೌಸ್‌ನಲ್ಲಿ ಬಂದು ಹೇಳಿದರೆ ಅದು ಡೆವನೇಟ್ಲಿ ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ. ಕಮಿಟಿ ರಿಪೋರ್ಟ್ ಹೌಸನಲ್ಲಿ ಅಕ್ಸೆಪ್ಟ್ ಮಾಡಿಕೊಳ್ಳುವವರೆಗೆ ಅದು ಫೋರ್ಸ್‌ಗೆ ಬರುವುದಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಮೆಟಿ ರೆಕಮೆಂಡೇಷನ್‌ನಲ್ಲಿ ಅದು ಇದೆಯೋ ಇಲ್ಲವೊ ಅದು ಬೇರೆ ವಿಷಯ, ಎಂಟನೆ ಪಿಧಾನಸಭೆಯಬ್ಬಿ ರಚನೆಯಾದಂತಹ ಆ ಸಮಿತಿಯ ವರದಿಯನ್ನು ಸದನ ಒಪ್ಪಿದೆಯೇ ಎನ್ನುವಂತಹ ಪ್ರಶ್ನೆ ಚರ್ಚೆಯಾಗುವುದಕ್ಕೆ ಮೊದಲು ಕ್ರಿಯಾಲೋಪವನ್ನು ನಾನು ಎತ್ತಿದ್ದೇನೆ. ಅದು ಸರಿಯೋ,ಇಲ್ಲವೋ ಎಂದು ತೀರ್ಪು ಆದರೆ ಸದನದಲ್ಲಿ ಬಂದಂತಹ ಪ್ರಶ್ನೆಯನ್ನು ಅವರು ಎತ್ತಿರತಕ್ಕಾಂಥಾದ್ದು ಹಕ್ಕುಚ್ಯುತಿಯೋ ಅಲ್ಲವೋ ಎನ್ನುವ ಪ್ರಶ್ನೆಗೆ ಮತ್ತೆ ಹೋಗಬೇಕಾಗುತ್ತದೆ. ಆದುದರಿಂದ ನಾನು ತಮ್ಮಲ್ಲಿ ಸ್ಪಷ್ಟವಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ ಅದರ ಬಗ್ಗೆ ತೀರ್ಪು ಕೊಟ್ಟರೆ ಮುಂದಕ್ಕೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು : ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಪ್ರಸ್ತಾಪ ಮಾಡಿರತಕ್ಕಂಥ ವಿಷಯ ಆ ಸಮಿತಿ ಎಂಟನೇ ವಿಧಾನ ಸಭೆಗೆ ಸಂಬಂಧಿಸಿದ್ದುದು. ಇದುವರೆಗೂ ಅದು ಸದನದ ಮುಂದೆ ಬಂದು ಒಪ್ಪಿಗೆ ಪಡೆದಿಲ್ಲ, ಆದುದರಿಂದ ಅದು ಅಪ್ರಸ್ತುತವಾಗಿದೆ. ತಾವು ಮುಂದುವರಿಸಿ. ಸನ್ಮಾನ್ಯ ನಾಗೇಗೌಡರು ಹಾಗೂ ಶ್ರೀರಾಮರೆಡ್ಡಿಯವರು ಎತ್ತಿರತಕ್ಕಂಥ ಕ್ರಿಯಾಲೋಪ ಕ್ರಮಬದ್ಧವಾಗಿದೆ,ಅದನ್ನು ಮಾನ್ಯ ಮಾಡಲಿಚ್ಛಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ,ನಾನು ಹೇಳುತ್ತಿದೆ. ಕ್ರಿಮಿನಲ್ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ರಕ್ಷಣೆ ಕೊಡುತ್ತಿದ್ದಾರೆ ಅಂತಹವರು ಈ ಸದನದಲ್ಲಿ ಇದ್ದಾಗ ಎನ್ನುವಂತಹ ವಿಚಾರವನ್ನು.....

ಆದರೆ ಆ ವಿಷಯ ಏನು ಬರುತ್ತದೆಯೋ ಗೊತ್ತಿಲ್ಲ. ಅದನ್ನೂ ನಾಳೆ ತೆಗೆಸುತ್ತೇನೆ. ಆದರೆ ಎಂಟನೇ ವಿಧಾನಸಭೆಯ ವಿಷಯ ಇಲ್ಲಿಗೆ ಬರುವುದಿಲ್ಲ, ಇದಕ್ಕೆ ಅದು ಸಂಬಂಧವೇ ಇಲ್ಲ.

ಶ್ರೀಮತ್ತಿ ಪ್ರಮೀಳಾ ನೇಸರ್ಗಿ : ನಮಗೆ ಹರಿ ಇಲ್ಲ, ನಾವು ಬರಿ ಮಾಡಲಿಕ್ಕೆ ಬಂದಿದ್ದೇವೆ.ಎಷ್ಟು ಹೊತ್ತಾದರೂ ಕುಳಿತು ಕೇಳುವುದಕ್ಕೆ ನಾವು ತಯಾರಾಗಿ ಬಂದಿದ್ದೇವೆ. ಹಾಗೆಯೇ ಉತ್ತರ ಕೊಡುವುದಕ್ಕೆ ಕೂಡ ಸಿದ್ಧರಾಗಿಯೇ ಬಂದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಹಾಗಿದ್ದರೆ ಮತ್ಯಾಕೆ ಪದೇಪದೇ ಎದ್ದುನಿಂತು ಮ್ಯೂಟರ್ ಅನ್ನು ಇಂಟ್ರೊಡ್ಯುಸ್ ಮಾಡುವುದಕ್ಕೆ ಹೋಗುತ್ತಿದ್ದೀರಿ? ಅದ್ಯಾಕೆ ಹಾಗೆ ಮಾಡುತ್ತಿರುವುದು? ಕಾನೂನು ಬಲ್ಲ ನೀವೆಲ್ಲ ಬೇರೆ ಮಾನ್ಯ ಸದಸ್ಯರೆಲ್ಲರ ವಿಚಾರ ಎಲ್ಲ ಕೇಳಿ ಪ್ರೊಸೀಜರ್‌ನ್ನು ಅನುಸರಿಸಿ ನಂತರ ತಾವು ತಮ್ಮ ಅಭಿಪ್ರಾಯ ಕೊಡುವುದಕ್ಕೆ ತಯಾರಾಗಿ ಕುಳಿತಿರ ಬೇಕು. ಅದುಬಿಟ್ಟು ಅದಾಗಿತ್ತು. ಇದಾಗಿತ್ತು ಎಂದು ಕಾಗಕ್ಕೆ ಗುಬ್ಬಕ್ಕ ಕಥೆ ಹೇಳಿಬಿಟ್ಟರೆ ಅದು ಇಲ್ಲಿ ಸರಿಯಾಗುವುದಿಲ್ಲ, ಇದೆಲ್ಲವನ್ನೂ ನೀವು ಬಿಡಬೇಕ. ಈ ಪದ್ಧತಿಗಳು ಈ ನಿಯಮಾವಳಿಯಲ್ಲಿ ಬರುವುದಿಲ್ಲ. ಅದಕ್ಕೆಲ್ಲ ನಿಯಮಾವಳಿಗಳು ಇವೆ. ಇದನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸುತ್ತಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರು ಈಸಂದರ್ಭದಲ್ಲಿ....

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ......

Sri S. Bangarappa: I have not yielded. ಮಾನ್ಯಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ, I am sorry.

ಅಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಈ ಸಂದರ್ಭದಲ್ಲಿ ನಾನು ಒಂದೇ ಒಂದು ವಿಷಯವನ್ನು ಹೇಳುವುದು. Please resume your seat. what is this? ನನಗೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಆಗುತ್ತಿಲ್ಲ. ಈ ಪದ್ಧತಿ ಸರಿಯಲ್ಲ.

ಅಧ್ಯಕ್ಷರು : ಪ್ರಮೀಳಾರವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನಾನು ತಮಗೆ ಹೇಳುತ್ತಾ ಇದ್ದೆ.....

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ನೀವು ಅವರಿಗೆ ಬುದ್ಧಿವಾದ ಹೇಳಬೇಕು.

ಅಧ್ಯಕ್ಷರು : ಸಭಾಪತಿಯವರಿಗೆ ,ಗಟ್ಟಿಯವರಿಗೆ ಈ ವಿಚಾರ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸಭಾಧ್ಯಕ್ಷರೇ, ನಾನು ತಮ್ಮ ಹತ್ತಿರ ಹೇಳುತ್ತಾ ಇದ್ದೆ. ಈ ರೀತಿ ಇರತಕ್ಕಂಥ ಕ್ರಿಮಿನಲ್ಸ್‌ಗೆ ರಕ್ಷಣೆ ಕೊಡುತ್ತಿದ್ದಾರೆ ಎನ್ನತಕ್ಕಂಥ ವಿಷಯದಲ್ಲಿ ಈ ಸದನದಲ್ಲಿ ಕೆಲವರಿದ್ದಾರೆ ಎಂಬ ಮಾತನ್ನು ಕೂಡ ಅವರು ಹೇಳಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ,ಅವರು ಯಾರು? ಕ್ರಿಮಿನಲ್ಸ್ ಯಾರು, ಅವರಿಗೆ ರಕ್ಷಣೆ ಕೊಟ್ಟಿರತಕ್ಕಂಥವರು ಯಾರು? ಈ ವಿಚಾರ ಕೂಡ ಚರ್ಚೆಯಾಗದಿದ್ದರೆ ಏನಾಗುತ್ತದೆ ಎಂದರೆ, ಸದನದಲ್ಲಿ ಸರ್ಕಾರ ನಡೆಸತಕ್ಕವರೀಗೆ ಇರಬಹುದು ಅಥವಾ ವಿರೋಧ ಪಕ್ಷಗಳಲ್ಲಿ ಯಾರಾದರೂ ಇರಬಹುದು, ಏಕೆಂದರೆ ಇಲ್ಲಿ ಯಾವ ಪಕ್ಷ ಎಂದು ಹೇಳತಕ್ಕಂಥಾದ್ದು ಬರುವುದಿಲ್ಲ, including BJP House ಅಥವಾ ಸದನಕ್ಕೆ ಎಂದರೆ including BJP also. ನಾಳೆ ರಕ್ಷಣೆ ಕೊಡತಕ್ಕಂಥವರು ಅಲ್ಲಿ ಇಲ್ಲಿ ಈ ಕಡೆ ಇದ್ದಾರೆ ಎನ್ನತಕ್ಕಂಥ ಅಭಿಪ್ರಾಯ ಬರಬಹುದು. ಆ ರೀತಿ ಬರಬಾರದು. ಅದು ಒಳ್ಳೆಯದಲ್ಲ. ನಮ್ಮ ವಿಚಾರದಲ್ಲಿ ನಾವೇ ಈ ರೀತಿ ಸಾಕ್ಷಾಧಾರಗಳು ಇಲ್ಲದೆ, ಹೇಳುತ್ತಾ ಹೋದರೆ ಅದರಿಂದ ಸದನಕ್ಕೆ ಯಾರೂ ಗೌರವವನ್ನು ಕೊಡುವುದಕ್ಕೆ ಆಗುವುದಿಲ್ಲ.ಈ ವಿಚಾರ ಕೂಡ ಸದನದ ಮಾನ್ಯ ಸದಸ್ಯರ ಹಕ್ಕು. ಘನತೆ. ಗೌರವದ ಪ್ರಶ್ನೆಯಾಗಿದ್ದು, ಇದರ ಚ್ಯುತಿ ಇದರಲ್ಲಿ ಅಡಗಿದೆ ಎನ್ನತಕ್ಕಂಥ ಅಂಶವನ್ನು ತಾವು ಮನಗಂಡಿದ್ದೀರಿ ಎಂದು ನಾನು ಭಾವಿಸಿದ್ದೇನೆ. ನಾಳೆ ನಿರ್ಣಯ ಮಂಡನೆಗೆ ತಾವು ಅನುಮತಿ ಕೊಟ್ಟ ಮೇಲೆ ಈ ವಿಚಾರದ ಬಗ್ಗೆ ಮಾಡೋಣ. ಇನ್ನು ಮೂರನೆಯ ವಿಷಯವೆಂದರೆ, ರಾಜಕೀಯ ಪಕ್ಷಗಳ ವಿಚಾರ ಬಗ್ಗೆ ಕೂಡ ಅವರು ಮಾತನಾಡಿದ್ದಾರೆ. ಅದು ಏನೆಂದರೆ, ನಾವು ಅವರ ಸಹಾನುಭೂತಿ ಗಳಿಸುವುದಕ್ಕೆ, ರಕ್ಷಣೆ ಪಡೆಯುವುದಕ್ಕೆ ನಾವು ಆಡಳಿತದಲ್ಲಿದ್ದಂಥ ಕಾಲದಲ್ಲಿ ನಮ್ಮ ಕಾರ್ನಾಟಕ ಕಾಂಗ್ರೆಸ್ ಪಕ್ಷ ಮತ್ತು ಕಾಂಗ್ರೆಸ್ (ಐ) ಪಕ್ಷ ಅಧಿಕಾರದಲ್ಲಿದ್ದಂಥ ಕಾಲದಲ್ಲಿ ಮಾಡಿರತಕ್ಕಂಥ ತಪ್ಪುಗಳ ಬಗ್ಗೆ ಸಾಕ್ಷಾಧಾರಗಳು ಅವರ ಹತ್ತಿರ ಇಡೆಯೆಂದು ಹೇಳಿ, ಆದಕ್ಕೆ ಆದರಿಂದ ರಕ್ಷಣೆ ಪಡೆಯುವುದಕ್ಕೋಸ್ಕರ ಪ್ರಯತ್ನ ಮಾಡಿದ್ದೇವೆ ಎನ್ನುತಕ್ಕಂಥ ಮಾತನ್ನು ಹೇಳಿದ್ದಾರೆ. ನಾಳೆ ನಿರ್ಣಯ ಮಂಡನೆಯ ಚರ್ಚೆಯಾದ ಮೇಲೆ ನಾನು ಸರ್ಕಾರವನ್ನು ಕೇಳುತ್ತೇನೆ. ಅಥವಾ ಈಗಲೂ ಕೂಡ ನಾನು ಹೇಳಬಹುದು. ಆದೇನೂ ತಪ್ಪಲ್ಲ ಮತ್ತು ಅಪ್ರಕೃತವಲ್ಲವೆಂದು ನಾನು ಭಾವಿಸಿದ್ದೇನೆ. ಸ್ವಾಮಿ, ಎಂದಾದರೂ ನಾವು ಯಾರಿಗಾದರೂ ಫೋನ್ ಮಾಡಿದ್ದರೆ, including the Hon.Chief Minister who is the Leader of the HouseË ಯಾರಿಗಾದರೂ ರಕ್ಷಣೆ ಮಾತ್ತೊಂದು ವಿಚಾರದಲ್ಲಿ ನಾನು ಏನಾದರೂ ನಿಮಗೆ ಹೇಳಿದ್ದೇವೆ ಎನ್ನತಕ್ಕಂಥ ಮಾತನ್ನು ಯಾರಾದರೂ ಇಲ್ಲಿ ಹೇಳಿಬಿಟ್ಟರೆ ಆ ವಿಚಾರವನ್ನು ನಾವು ಸಂಪೂರ್ಣವಾಗಿ ಒಪ್ಪುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು : ಈ ಡಿಟೇಲ್ಸ್ ಎಲ್ಲಾ ನಾಳೆ ಹೇಳಿ.

ಶ್ರೀ ಎಸ್. ಬಂಗಾರಪ್ಪ : ನಾಳೆ ಮುಂದುವರೆಸುವುದೇ?

ಅಧ್ಯಕ್ಷರು : ಅಲ್ಲಲ್ಲ, ಡಿಟೇಲ್ಸ್ ನಾಳೆ ಹೇಳಿ ಎಂದು ಹೇಳಿದೆ. ಸದನ ಅನುಮತಿ ಕೊಡಬೇಕಲ್ಲ?

ಶ್ರೀ ಎಸ್. ಬಂಗಾರಪ್ಪ : ಆದರೂ ಕೂಡ ಈಗಲೇ ಹೇಳಬಹುದೇ ಎಂದು ಒಂದು ಪ್ರಯತ್ನ ಮಾಡಿ ನೋಡಿದೆ.

ಅಧ್ಯಕ್ಷರು : ಬೇಡಿ. ನಾನು ಇನ್ನೂ ಅಲರ್ಟ್ ಆಗಿದ್ದೇನೆ

ಶ್ರೀ ಎಸ್. ಬಂಗಾರಪ್ಪ : ಅದ್ದರಿಂದ ಇವತ್ತು ಈ ಸಂದರ್ಭದಲ್ಲಿ ನಾನು ಹೇಳುವದೇನೆಂದರೆ,ಬೇರೆಯವರು ಕೂಡ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದಲ್ಲ ಇದ್ದಾವೆ ಎಂಬ ಅಂಶವನ್ನು ಮರೆಯಬಾರದು. ಒಂದು ಮಾತನ್ನು ಹೇಳಿದ ಮೇಲೆ ಅದನ್ನು ರುಜುವಾತು ಪಡಿಸತಕ್ಕಂಥ ವಿಷಯ ಅವರಿಗೆ ಏನಾದರೂ ಇದ್ದರೆ, ಸಬನ ನಡೆಯುತ್ತಿರುವಾಗ ಬೇಕಾದರೆ ಇಲ್ಲಿ ಹೇಳಬಹುದು. ಇಲ್ಲಿ ಕೇಳಬಹುದು. ಅದೇನೂ ಇಲ್ಲದೆ. ತೆಗೆದುಕೊಂಡುಹೋಗಿ ಅಲ್ಲಿ ಹೇಳಿರತಕ್ಕಂಥಾದ್ದು ನಮ್ಮ ಹಕ್ಕಿಗೆ, ಪಕ್ಷದ ಹಕ್ಕಿಗೆ ಚ್ಯುತಿಯನ್ನು ಅವರು ಸ್ಪಷ್ಟವಾಗಿ ತಂದಿಟ್ಟಿದ್ದಾರೆ. ಇದೂ ಅಲ್ಲದೇ ಇನ್ನೂ ಅನೇಕ ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ, ದಯವಿಟ್ಟು ತಾವು ನಿರ್ಣಯಕ್ಕೆ ಅನುಮತಿಯನ್ನು ಕೊಟ್ಟರೆ, ತಾವು ಅನುಮತಿಯನ್ನು ಕೊಡುತ್ತೀರಿ ಎಂದು ನಂಬಿಕೆಯಿಂದ ಇದ್ದೇನೆ. ಅದಕ್ಕಾಗಿ ನಾವು ಸಂಪೂರ್ಣವಾದ ವಿವರಗಳನ್ನು ಹೇಳುವುದಕ್ಕೆ ಕೂಡ ಸಿದ್ಧರಾಗಿದ್ದೇವೆ. ಆದ್ದರಿಂದ ಮಾನ್ಯ ನಾಗೇಗೌಡರು ತಮ್ಮ ಅನುಮತಿಯನ್ನು ಕೇಳಿರತಕ್ಕಂಥ ಅವರ ನಿರ್ಣಯದ ಬಗ್ಗೆ ಮತ್ತು ರೆಡ್ಡಿಯವರು ಕೂಡ ಅವರು ಕಳಿಸಿರತಕ್ಕಂಥ ನಿರ್ಣಯ ಮತ್ತು ನಾವು ಕಳಿಸಿರತಕ್ಕಂಥ ನಿರ್ಣಯದ ಬಗ್ಗೆ ತಾವು ಅನುಮತಿಯನ್ನು ಕೊಡಬೇಕು, ಏಕೆದರೆ ತಾವು ಅನುಮತಿಯನ್ನು ಕೊಡುವುದಕ್ಕೆ ಇದಕ್ಕಿಂತ ಒಳ್ಳೆಯ ಸಬ್ಜೆಕ್ಟ್ ತಮಗೆ ಸಿಗಲಾರದು ಎಂದು ನನ್ನ ಭಾವನೆ. ಏಕೆಂದರೆ ಹುಡುಕಿದರೂ ಸಿಗಲಾರದಂಥ ಸಬ್ಜೆಕ್ಟ್ ಇದು. ಬಹ ಅಪರೂಪವಾಗಿರತಕ್ಕಂಥ ಸಬ್ಜೆಕ್ ಇದಾಗಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬಹಳ ಒಳ್ಳೆಯ ವಿಷಯ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ತಾವು ಅನುಮತಿಯನ್ನು ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ನೋಡಿ, ಶ್ರೀನಿವಾಸ್‌ರವರೇ, ದಯಮಾಡಿ ಉದ್ರೇಕಕ್ಕೆ ಅವಕಾಶ ಮಾಡಿಕೊಳ್ಳಬಾರದು.

ಶ್ರೀ ಎಂ. ಶ್ರೀನಿವಾಸ್ : ನಾನೇನೂ ಹೇಳುತ್ತಾ ಇಲ್ಲಲ್ಲ. ಹೇಳತಕ್ಕಂಥ ಪರಿಸ್ಥಿತಿ ಬಂದಾಗ ನಾವು ಹೇಳುತ್ತೇವೆ. ಸುಮ್ಮನೆ ನಾವು ಯಾವಾಗಲೂ ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಹಾಗಾದರೆ ಒಂದು ನಿಮಿಷ. ದಯಮಾಡಿ ತಾವು ಹೇಳಿ. 12 ಗಂಟೆಗೆ ಯಾವ ಕೇಸಿಗೆ ಬೇಲ್ ತೆಗೆದುಕೊಳ್ಳುವುದಕ್ಕೆ ಹೋಗಿದ್ದೀರಿ ಹೇಳಿ.

ಶ್ರೀ ಎಂ. ಶ್ರೀನಿವಾಸ್ : ಅವರು ಯಾವ ವೇಳೆಗೆ ಹೋಗಿ ಬಂದರು? ಅವರು ಯಾವ ಆಧಾರದ ಪೇಪರ್ಸ್‌ನ್ನು ಇಟ್ಟು ಕೊಂಡಿದ್ದಾರೆ?

ಅಧ್ಯಕ್ಷರು : ನಿಮಗೆ ಅವಕಾಶ ಸಿಕ್ಕಾಗ ನೀವು ಹೇಳಿ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

(ಕೆಲವು ಸದಸ್ಯರು ಏಕಕಾಲದಲ್ಲಿ ಮಾತನಾಡಿದರು)

ಅಧ್ಯಕ್ಷರು : ನಾನು ಯಾರು ಮಾತನಾಡುವುದಕ್ಕೂ ತಡೆಹಾಕಿಲ್ಲ.

ಶ್ರೀ ಎಂ. ಶ್ರೀನಿವಾಸ್ : ನಾವು ಯಾವತ್ತೂ ಆ ರೀತಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಎಂ. ಶ್ರೀನಿವಾಸ್ : ಮಾತು ಬಂದಾಗಲೇ ನಾವು ಮಾತನಾಡುವುದು.

ಅಧ್ಯಕ್ಷರು : ನೀವು ಕುಳಿತಲ್ಲಿ, ನಿಂತಲ್ಲಿ ಮತ್ತೊಬ್ಬರು ಸದಸ್ಯರು ಮಾತನಾಡುತ್ತಿದ್ದಾಗ ಮಧ್ಯೆಮಧ್ಯೆ ನಿಮ್ಮ ಮನಸ್ಸೇಚ್ಛೆ ಈ ರೀತಿ ವ್ಯಾಖ್ಯಾನಗಳನ್ನು ಮಾಡುತ್ತಾ ಇದ್ದರೆ ಪತ್ರಿಕೆಯವರು ನಿಮಗೆ ಬಹಳ ಹತ್ತಿರದಲ್ಲಿದ್ದಾರೆ. ಅದು ರೆಕಾರ್ಡಿಗೆ ಹೋಗುತ್ತದೆಯೋ, ಇಲ್ಲವೋ ಗೊತ್ತಿಲ್ಲ. ಅವರು ನಾಳೆ ಮತ್ತೆ ಪ್ರಸ್ತಾಪ ಮಾಡಿ ಬರೆದರೆ ನನಗೆ ಕಷ್ಟವಾಗುತ್ತದೆ.

ಶ್ರೀ ಎಂ. ಶ್ರೀನಿವಾಸ್ : ಅಲ್ಲ.....

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನಾನು ಹೌಸ್‌ನ್ನು ರೆಗ್ಯುಲೇಟ್ ಮಾಡಬೇಕಾಗಿದೆ.

ಶ್ರೀ ಎಂ. ಶ್ರೀನಿವಾಸ್ : ಆಧಾರದ ಮೇಲೆಯೇ ನಾನು ಹೇಳಿದ್ದುದು.

ಅಧ್ಯಕ್ಷರು : ಹೇಳುವುದಕ್ಕೆ ಇಲ್ಲಿ ಒಂದು ವಿಧಾನ ಇದೆ.

ಶ್ರೀ ಎಂ. ಶ್ರೀನಿವಾಸ್ : ಒಂದು ಕೆಲಸ ಮಾಡಿ. ನಮ್ಮವರು ಮಾತನಾಡುವಾಗ ಅವರು ಯಾರೂ ಮಾತನಾಡದಿದ್ದರೆ ನಾವು ಮಾತನಾಡುವುದಿಲ್ಲ. ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ. ನಾವು ಮಾತನಾಡುವುದೇ ಇಲ್ಲ.

ಅಧ್ಯಕ್ಷರು : ದಯಮಾಡಿ ಅಧ್ಯಕ್ಷರಿಗೆ ಕಂಡೀಶನ್ಸ್ ಹಾಕುವುದನ್ನು ಬಿಡಿ. ನನ್ನ ಸ್ವರೂಪ ಬದಲಾಗುವುದಕ್ಕೆ ದಯಮಾಡಿ ನನ್ನನ್ನು ಬಲವಂತ ಮಾಡಬೇಡಿ. ಪ್ರತಿಯೊಬ್ಬರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಯಾವ ಸದಸ್ಯರನ್ನು ನಾನು ಕರೆಯುತ್ತೇನೋ, ಯಾರಿಗೆ ಅವಕಾಶ ಕೊಟ್ಟಿರುತ್ತೇನೋ, ಅವರು ತಮ್ಮ ಕಾಲಮೇಲೆ ನಿಂತು ವಾದ ಮಂಡನೆ ಮಾಡುವುದಕ್ಕೆ ಅವಕಾಶ ಇರುತ್ತದೆ. ನಾನು ಯಾರ ವಾದವನ್ನೂ ತಡೆಹಿಡಿಯುವುದಕ್ಕೆ ಇಚ್ಛೆಪಡುತ್ತಿಲ್ಲ. ಮತ್ತೊಬ್ಬರಿಗೆ ಅವಕಾಶ ಸಿಕ್ಕಿದಾಗ ಅವರು ಅದನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡು ಏನು ಹೇಳಬೇಕೆಂದು ಇದ್ದಾರೋ, ಅದನ್ನು ಹೇಳಬಹುದು. ಆದರೆ ಮಧ್ಯೆ ಮಧ್ಯೆ ವ್ಯಾಖ್ಯಾನ ಮಾಡತಕ್ಕಂಥಾದ್ದು, ಉದಿತ್ತ ವಾತಾವರಣಕ್ಕೆ ಅವಕಾಶ ಮಾಡಿಕೊಡತಕ್ಕಂಥ ನಡವಳಿಕೆ ಯಾವುದೇ ಸದಸ್ಯರು ಮಾಡತಕ್ಕಂಥಾದ್ದು ಅಪೇಕ್ಷಣೀಯ ಅಲ್ಲ. ಈ ಕುರ್ಚಿ ಕೂಡ ಅದನ್ನು ಸಹಿಸುವುದಿಲ್ಲ. ದಯಮಾಡಿ ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು : ಇದನ್ನು ನಿಮ್ಮ ಸ್ನೇಹಿತರು, ಎಲ್ಲರೂ ಕೂಡ ಜ್ಞಾಪಕದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ. ಅನೇಕ ಜನ ಹಿರಿಯ ಮುಖಂಡರು ಇಲ್ಲಿ ಇದ್ದಾರೆ. ಒಬ್ಬರು ಮಾತನಾಡುವಾಗ ಹಿಂದುಗಡೆಯಿಂದ ತೊಂದರೆ ಮಾಡುತ್ತಾ ಹೋದರೆ ನಮಗೆ ಯಾರಿಗೂ ಇದರಿಂದ ಗೌರವ ಇರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಈ ಕಾರಣಗಳ ಆಧಾರದ ಮೇಲೆ, ವಿಷಯದ ಘನತೆಯನ್ನು ಅನುಸರಿಸಿ ತಾವು ಚರ್ಚೆಗೆ ಸಂಪೂರ್ಣವಾಗಿ ಅನುಮತಿಯನ್ನು ಕೊಡಬೇಕು. ಮತ್ತೆ ಹೌಸ್ ಆಫ್ ಕಾಮನ್ಸ್ ಇರಬಹುದು, ಪಾರ್ಲಿಮೆಂಟ್

ಇರಬಹುದು, ಅಲ್ಲಿ ನಡೆದಿರತಕ್ಕಂಥ ತೀರ್ಮಾನಗಳು ಮತ್ತು ಇಲ್ಲಿ ನಮ್ಮ ಸದನದಲ್ಲಿ ಕೂಡ ಆಗಿರತಕ್ಕಂಥ ಕೆಲವು ತೀರ್ಮಾನಗಳನ್ನು, ಎಲ್ಲವನ್ನು ಕೂಡ ಉಲ್ಲೇಖ ಮಾಡಿ ಏತಕ್ಕಾಗಿ ನಾವು ಈ ನಿರ್ಣಯವನ್ನು ತಮ್ಮ ಅನುಮತಿಗಾಗಿ ಅಥವಾ ಚರ್ಚೆಗಾಗಿ, ತೀರ್ಪಿಗಾಗಿ ನಾವು ಮಂಡನೆ ಮಾಡುತ್ತಿದ್ದೇವೆ, ನಮ್ಮ ವಿಚಾರದ ಬಗ್ಗೆ ಸಾಕಷ್ಟು ನಮ್ಮ ವಾದಕ್ಕೆ ಶಕ್ತಿ ತುಂಬಿ ಅಂತಿಮ ತೀರ್ಮಾನವನ್ನು ತಮಗೆ ಬಿಡುವವರಿದ್ದೇವೆ. ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ತಮಗೆ ವಂದಿಸುತ್ತೇನೆ, ಮತ್ತು ಇದಕ್ಕೆ ಪೂರ್ವಾನುಮತಿಯನ್ನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಇದಕ್ಕೆ ಬೇಕಾಗಿರುವಂಥ ನಿಯಮಾವಳಿಗಳ ಪ್ರಕಾರ ಏನು ಬೆಂಬಲ ಇದರಲ್ಲಿ ಇದೆ, ಅದಕ್ಕೆ ನಾವು ಸಿದ್ಧರಾಗಿದ್ದೇವೆ ಮತ್ತು ಅದಕ್ಕೆ ಬೆಂಬಲವನ್ನು ಕೂಡ ಕೊಡುತ್ತೇವೆ. ಇಷ್ಟು ಹೇಳಿ ತಮ್ಮನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು : ಈಗ ಸನ್ಮಾನ್ಯ ನಂಜೇಗೌಡರು ನಂತರ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡಲಿ ಅಥವಾ ಸಭೆಯನ್ನು ಮುಂದೂಡಿ ನಾಳೆ ಮುಂದುವರಿಸೋಣವೇ, ಯಾವ ರೀತಿ ಮಾಡೋಣ. ಮಾನ್ಯ ಉಪನಾಯಕರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಜೆ.ಹೆಚ್. ಪಟೇಲ್ : ಹಕ್ಕುಚ್ಯುತಿ ನಿರ್ಣಯ ಮೂವ್ ಮಾಡಿರುವವರು ಹೇಳಿದ್ದಾರೆ. ತಾವು ಈಗಲೇ ಅನುಮತಿ ಕೊಡಬಹುದು ಅಥವಾ ನಾಳೆ ಕೊಡಬಹುದು. ತಾವು ಅನುಮತಿ ಕೊಟ್ಟಮೇಲೆ ಬೇಕಾದರೆ ವಿವರಗಳನ್ನು ಕೊಡಬಹುದು. ಅಡ್ಮಿಸಿಬಿಲಿಟಿ ಬಗ್ಗೆ ಇದುವರೆಗೂ ನಡೆದಿರುವುದು. ಆಡ್ಮಿಟ್ ಆಗುವುದಕ್ಕೆ ಒಂದು ಪ್ರೊಸೀಜರ್ ಇದೆ. ಅದನ್ನು ಬೇಕಾದರೆ ಈಗಲೇ ಮುಗಿಸಬಹುದು ಅಥವಾ ನಾಳೆ ಮಾಡಬಹುದು. ಈ ವಿಚಾರ ತಮಗೆ ಬಿಟ್ಟಿದ್ದುದು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಿತ್ರರಾದಂಥ ನಾಗೇಗೌಡರು ಈ ಹಿಂದೆ ಹೇಳಿದರು. ನಾಲ್ಕು ಸೂಚನೆಗಳೂ ಕೂಡ ಒಂದೇ ಅಂಶಕ್ಕೆ ಸೀಮಿತವಾಗಿರತಕ್ಕಂಥ ವಿಷಯಗಳು. ಆದ್ದರಿಂದ, ಇವತ್ತು ಮೂರು ಜನ ಸದಸ್ಯರು ಕೊಟ್ಟಿರತಕ್ಕ ಸೂಚನೆಗಳನ್ನು ಕೇಳಿದ್ದೇನೆ. ಇನ್ನು ಕೇಳಬೇಕಾಗಿರತಕ್ಕಂತಾದ್ದು ನಾಲ್ಕನೇ ಸೂಚನೆ. ಈ ನಾಲ್ಕನೇ ಸೂಚನೆಯಾದ ಮೇಲೆ, ತಾವು ಈ ಸೂಚನೆಯನ್ನು ನಿಯಮ 191ರ ಅಡಿಯಲ್ಲಿ ಸರಿ ಎಂದು ತೀರ್ಮಾನ ಮಾಡಿದ ಮೇಲೆ, ಇನ್ನು ಬಾಕಿ ಇರತಕ್ಕಂತಾದ್ದು ಎಲ್ಲವೂ ಕೂಡ ಈ ಸದನದ ಆಸ್ತಿ. ಇದೆಲ್ಲಾ ವಿಷಯಗಳಿಗೂ ಸದನವೇ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಇವತ್ತು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕೂಡ ಈ ಸೂಚನೆ ಬಗ್ಗೆ ಹೇಳುವುದನ್ನು ಹೇಳಿದ ಮೇಲೆ, ಮತ್ತೆ 195ರ ಅಡಿಯಲ್ಲಿ ನಾಳೆ ತೀರ್ಮಾನವನ್ನು ತೆಗೆದುಕೊಳ್ಳಬಹುದು. ಏಕೆಂದರೆ, ಈ ನಾಲ್ಕು ಸೂಚನೆಗಳನ್ನೂ ತೆಗೆದುಕೊಂಡಾದ ಮೇಲೆ, ಯಾರಾದರೂ ಇದಕ್ಕೆ ವಿರೋಧ ಇದ್ದಾರೆಂದು ಕಂಡಾಗ ಈ ಪ್ರಶ್ನೆ ಬರುತ್ತದೆ. ವಿರೋಧ ಇಲ್ಲದೇ ಇದ್ದರೆ, ಈ ಸೂಚನೆಗಳು ಕೂಡಲೇ ಇತ್ಯರ್ಥಕ್ಕೆ ಬರುತ್ತವೆ. ಒಂದು ವೇಳೆ ವಿರೋಧ ಇದ್ದರೆ ಆ ತೀರ್ಮಾನಕ್ಕೋಸ್ಕರ ಸದನಕ್ಕೆ ಬಿಡಬೇಕಾಗುತ್ತದೆ. ಆದ್ದರಿಂದ ಬಹುಶಃ ಕಾಗೋಡು ತಿಮ್ಮಪ್ಪನವರು ಇದರ ಬಗ್ಗೆ ವಿಚಾರವನ್ನು ಹೇಳಿದರೆ, ಬಾಕಿ ಇರತಕ್ಕ ವಿಚಾರವನ್ನು ನಾಳೆ ತೆಗೆದುಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಈ ಹಕ್ಕುಚ್ಯುತಿ ನಿರ್ಣಯಕ್ಕೆ ಪ್ರಿಲಿಮಿನರಿ ಸಬ್‌ಮಿಷನ್ ಕೇಳಿದಿರಿ. ತಾವು ಅಲೋ ಮಾಡುವುದು, ಬಿಡುವುದು, ಅದರ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೀರಿ. ನಾನು ತಮ್ಮ ಗಮನಕ್ಕೆ

ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಾನಾಗಲೇ ಈ ರಾಜ್ಯದ ಜನರಿಗೆ ಒಂದು ಮಾತನ್ನು ಹೇಳಿದ್ದೇನೆ. ನನ್ನ 10.8.95ರ ಪತ್ರಿಕಾಗೋಷ್ಠಿಯಲ್ಲಿ ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನನ್ನು ಹೇಳಬೇಕೆಂದಿದ್ದೇನೋ ಅದನ್ನು ಈ ರಾಜ್ಯದ ಜನರಿಗೆ ಹೇಳಿದ್ದೇನೆ. ಪತ್ರಿಕಾ ಗೋಷ್ಠಿಯಲ್ಲಿ ತಪ್ಪು ಕಲ್ಪನೆಗೆ ಅವಕಾಶವಿಲ್ಲವೆಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಬೇಡವೆಂದು ಹೇಳಿದರೆ, ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು : ನನಗೆ,ನಿಮ್ಮ ವಿವರಣೆಯನ್ನು ಕೇಳತಕ್ಕಂಥ ಅವಕಾಶ ಕೂಡ ನಿಯಮಾವಳಿಯಲ್ಲಿ ಇರುತ್ತದೆ. ಈಗ ಸನ್ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದುದು, ಅವರ ವ್ಯಾಖ್ಯಾನವನ್ನು ಪ್ರತಿಪಾದನೆ ಮಾಡಿದ್ದಾರೆ. 194ರಲ್ಲಿ 1, 2 ಆದಮೇಲೆ 195 ಬರುತ್ತದೆ. ಅವರಿಗೆ ಆತುರ ಇದ್ದರೆ, ನನಗೆ ಆತುರ ಇಲ್ಲ. ತಮಗೆ ಇಷ್ಟನ್ನೇ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು, ಅವರ ವಾದವನ್ನು ಮಂಡನೆ ಮಾಡಲಿ. ಪ್ರಿಲಿಮನರಿ ಅಡ್ಮಿಷನ್ ಬಗ್ಗೆ ಸನ್ಮಾನ್ಯ ನಂಜೈಗೌಡರು, ಇತರೆ ಸನ್ಮಾನ್ಯ ಸದಸ್ಯರು, ಶ್ರೀಮತಿ ಪ್ರಮಿಳಾ ನೇಸರ್ಗಿಯವರು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತ ಮಾಡತಕ್ಕಂಥ ಆಸಕ್ತಿಯನ್ನು ತೋರಿಸಿದ್ದಾರೆ. ಅದನ್ನೂ ಕೇಳುತ್ತೇನೆ. ಸದನ ಅನುಮತಿಕೊಡುವುದಕ್ಕೆ ಮೊದಲು ನಿಮ್ಮ ವಿವರಣೆಯನ್ನೂ ಕೇಳತಕ್ಕಂಥ ಅವಕಾಶ ನನಗೆ ಇರುತ್ತದೆ. ಈ ಹಂತದಲ್ಲಿ ತಾವು ಪ್ರವೇಶ ಮಾಡಿ, ಏನೂ ಹೇಳುವುದು ಬೇಡ, ಅದು ಉಚಿತ ಅಲ್ಲ. ಹೊಸ ಸಂಪ್ರದಾಯ ಹಾಕುವುದು ಬೇಡ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಮಗೆ ಅವಕಾಶ ಇರುತ್ತದೆ. ನಾನು ನಿಮಗೆ ಈ ಅವಕಾಶದ ವಂಚನೆ ಮಾಡುವುದಿಲ್ಲ. ಸನ್ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಈಗ ಮಾತನಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕಿಂತ ಮುಂಚೆ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ, ಈಗಾಗಲೇ ಸಮಯ ಆಗಿದೆ. ಏಕೆಂದರೆ, ನಾವು ಪೂರ್ವಭಾವಿಯಾಗಿ ಹೇಳಿದ ಮೇಲೆ ಅಥವಾ ಹೇಳಿದಂಥ ಮಾತಿಗೆ ಪ್ರತಿಯಾಗಿ ಶ್ರೀಮಾನ್ ನಂಜೇಗೌಡರೂ ಹೇಳಬೇಕೆಂದು ಸಿದ್ಧತೆ ಮಾಡಿದ್ದಾರೆ. ಇದು, ಇನ್ನೂ ಸಾಕಷ್ಟು ಸಮಯ ತೆಗೆದುಕೊಳ್ಳಬಹುದು. ಏಕೆಂದರೆ, ತಾವು ಒಂದು ಸಾರಿ ತಿರಸ್ಕಾರ ಮಾಡಿದರೆ, ಮತ್ತೆ ಇದರ ಬಗ್ಗೆ ಹೆಚ್ಚು ಸಮಯ ಇರುವುದಿಲ್ಲ. ತಾವು ಒಪ್ಪಿಗೆ ನೀಡಿದರೆ, ಆಗಲೇ ಮತ್ತು ಚರ್ಚೆಗೆ ಕೈಗೆತ್ತಿಕೊಳ್ಳಬೇಕಾಗುತ್ತದೆ. ಆದ್ದರಿಂದ ಇವತ್ತು, ನಾವು ಎಷ್ಟು ಹೊತ್ತು ಕುಳಿತರೂ ಕೂಡ, ನಾಳೇ ತಾವು ತೀರ್ಮಾನ ಕೊಟ್ಟು ಮತ್ತೆ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಈಗ ನಾನು ಮಾಚನಾಡುವುದು, ಮಾನ್ಯ ನಂಜೇಗೌಡರು ಮತ್ತು ಅವರ ಕಡೆಯ ಸ್ನೇಹಿತರು ಮಾತನಾಡುವುದು. ಇದಕ್ಕೆಲ್ಲಾ ಸಾಕಷ್ಟು ಸಮಯ ಸಿಗುತ್ತದೆ. ತಾವು ಇವತ್ತೇ ಕನ್‌ಸೆಂಟ್ ಅಥವಾ ಒಪ್ಪಿಗೆ ಕೊಟ್ಟರೆ, ಮತ್ತೆ ಇವತ್ತೇ ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ, ಇವತ್ತು ಮುಂದೂಡಿ ನಾಳೆ ತೆಗೆದುಕೊಳ್ಳಬಹುದೆಂದು ನನ್ನ ಒಂದು ಸಲಹೆ. ಇದು ತಮಗೇ ಬಿಟ್ಟಿದ್ದು. ಇಲ್ಲದೇ ಹೋದರೆ, ನಾನು ಮಾತನಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈ ಸ್ಥಾನದಲ್ಲಿ ಕುಳಿತು, ಒಂದು ಸಂಗತಿಯನ್ನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುವಂಥಾದ್ದು, ಈ ಕಡೆಯವರಾದ ನಾವು ಎಷ್ಟು ಸಮಯ ಬೇಕಾದರೂ ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಇದು ಪ್ರಮುಖವಾದ ವಿಷಯವಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಅತ್ಯಂತ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಅವರು ಹೇಳಬೇಕು, ಅತ್ಯಾವಶ್ಯಕವಾಗಿ ಹೇಳಬೇಕು. ನಾವೆಲ್ಲರೂ ಇಲ್ಲಿ ಕುಳಿತಿದ್ದೇವೆ..

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಆ ವಿಷಯಕ್ಕೆ ಹೋಗುತ್ತಲೇ ಇಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ, ದಯಮಾಡಿ, ಈ ಚರ್ಚೆ ಪ್ರಾರಂಭವಾಗಿದೆ. ಈ ಚರ್ಚೆ ಪ್ರಾರಂಭವಾಗಲಿ, ಸಂಗತಿಗಳನ್ನು ತಾವು ಕೇಳಿ. ನಾವೇನು ಹೇಳಬೇಕೆಂದು ಹೇಳುತ್ತೇವೆ. ರಾತ್ರಿ 12.30 ಗಂಟೆಯಾಗಲೀ ಅಥವಾ ಒಂದು ಗಂಟೆಯಾಗಲೀ ಪೂರ್ಣವಾಗಿ ನಾವು ಕುಳಿತುಕೊಳ್ಳುವುದಕ್ಕೆ ಸಿದ್ಧವಿದ್ದೇವೆ. ಏಕೆಂದರೆ, ಲೋಕಸಭೆಯಲ್ಲಿ ರಾತ್ರಿ 2-3 ಗಂಟೆಯವರೆಗೂ ಕುಳಿತಿರುವುದು ಉಂಟು. ಇಲ್ಲಿಯೂ ಕೂಡ ರಾತ್ರಿ 11-12 ಗಂಟೆಯವರೆಗೂ ಕುಳಿತಿರುವುದು ಉಂಟು. ಇದು ಅತ್ಯಂತ ಪ್ರಮುಖವಾದ ವಿಷಯ. ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಯಾಗುವಂಥ ಈ ಸಂದರ್ಭದಲ್ಲಿ, ರಾತ್ರಿ 12 ಗಂಟೆಯವರೆಗೂ ನಾವು ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ದಯಮಾಡಿ ಎಲ್ಲವನ್ನೂ ಕೇಳಿ, ತಮ್ಮ ತೀರ್ಪನ್ನು ಕೊಡಬೇಕೆಂದು ಅತ್ಯಂತ ವಿನಯದಿಂದ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ನಾಳೆ ಅತ್ಯಂತ ಪ್ರಮುಖವಾಗಿರುವಂಥ ಬರಗಾಲದ ವಿ,ಯದ ಬಗ್ಗೆ ಚರ್ಚೆ ಮಾಡದೇ ಇದ್ದರೆ, ರಾಜ್ಯದ ಜನರಿಗೆ ನಾವು ಮುಖ ತೋರಿಸುವುದಕ್ಕಾಗುವುದಿಲ್ಲ. ಅದಕ್ಕಾಗಿ ಈ ಕಡೆಯವರಾದ ನಾವು ಎಷ್ಟು ಹೊತ್ತಿನವರೆಗೂ ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ರಾಜ್ಯದ ಜನರ ಅಳಿವು, ಉಳಿವಿನ ಪ್ರಶ್ನೆ ಇಲ್ಲ. ಅಂತಹ ಪ್ರಮುಖವಾದ ಚರ್ಚೆಗೆ ಅವಕಾಶ ಇಲ್ಲ.

ನಾವು ಮಾತ್ರ ರಾತ್ರಿ 1-2 ಗಂಟೆಯವರೆಗೂ ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ದಯಮಾಡಿ. ಅವರು ಏನು ಹೇಳಬೇಕೆಂದಿದ್ದಾರೋ, ಅದೆಲ್ಲವನ್ನೂ ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಬಹಳ ಹೊತ್ತು ಕುಳಿತುಕೊಳ್ಳುವುದಕ್ಕೆ ನನಗೆ ಮತ್ತು ಉಪಾಧ್ಯಕ್ಷರಿಗೆ ಇಬ್ಬರಿಗೂ ಮನೆಯೊಳಗೆ ಒಂದು ಶಿಸ್ತು ಇದೆ, ಅದು ಬಹಳ ಬೇಗ ಮನೆಗೆ ಬರಬೇಕು ಎಂದು ಲೇಟಾಗಿ ಮನೆಗೆ ಹೋಗುವ ಹಾಗೆ ಇಲ್ಲ. ಆದ್ದರಿಂದ, ನೀವು ಅಪೇಕ್ಷೆ ಪಟ್ಟರೂ ನಾವು ಲೇಟಾಗಿ ನಡೆಸುವುದಕ್ಕೆ ತಯಾರಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವಂತೂ ನಮ್ಮ ಹೆಂಡತಿ ಮಕ್ಕಳೆಲ್ಲರನ್ನೂ ಬಿಟ್ಟುಬಂದಿದ್ದೇವೆ. ನಮಗೆ ಇದೇ ಪ್ರಮುಖವಾದ ವಿಷಯ. ಇದರ ಬಗ್ಗೆಯೇ ಮನೆಯವರೂ ಕಳುಹಿಸಿಕೊಟ್ಟಿದ್ದಾರೆ. ರಾಜ್ಯದ ಜನರ ಪರವಾಗಿ ಇದೇ ಕೆಲಸ ಮಾಡಬೇಕೆಂದೂ, ಹಗಲು ರಾತ್ರಿ ಕೆಲಸ ಮಾಡಿ ಎಂದು ನಮ್ಮನ್ನು ಕಳುಹಿಸಿಕೊಟ್ಟಿದ್ದಾರೆ. ನಾವು ಇದಕ್ಕಾಗಿಯೇ ಬಂದಿರುವುದು, ನಾವಂತೂ ಸಿದ್ಧರಿದ್ದೇವೆ.

ಅಧ್ಯಕ್ಷರು : ಮತ್ತೆ ಅವರು ಬೇರೆ ದಾರಿ ಹುಡುಕುತ್ತಾರೆ. ಇದರ ಜೊತೆಗೆ ಮತ್ತೆ ಅದು ಬೇಡ. ಸುಮ್ಮನೆ ಇರಿ. ಈಗ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಸಲಹೆಯನ್ನು ನಾನು ಒಪ್ಪುತ್ತೇನೆ. ಉಳಿದ ಭಾಗವನ್ನು ನಾಳೆ ಮುಂದುವರಿಸಬಹುದು. ಈ ರಾತ್ರಿ ಆದರೆ ಮಳೆಗಿಳೆ ಬಿದ್ದು, ವಾತಾವರಣ ತಣ್ಣಗಾಗುತ್ತದೆಯೋ ಏನೋ ನೋಡೋಣ. ಈಗ ಸಭೆಯನ್ನು ಮುಂದಕ್ಕೆ ಹಾಕಿ, ನಾಳೆ ಬೆಳಿಗ್ಗೆ ಪುನ 11 ಗಂಟಗೆ ಸಮಾವೇಶಗೊಳ್ಳುತ್ತದೆ.

ಸದನವು ಸಂಜೆ 8.18ಕ್ಕೆ ಮುಕ್ತಾಯಗೊಂಡು, ಮತ್ತೆ ದಿನಾಂಕ 22.8.95ರಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.

\+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸುವುದಿಲ್ಲ ಎಂದು ಸೂಚಿಸುತ್ತದೆ.